ISSN : 2320-0391

# सृजन ಸೃಜನ

हिन्दी-कन्नड साहित्य और संस्कृति
ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ

जनवरी-मार्च २०१७
त्रैमासिक पत्रिका



Scanned with CamScanner

# ಪರಿವಿಡಿ


೧. ದ್ವಿತ್ವ : ಒಂದು ಸಮೀಕ್ಷೆ • ಡಾ. ಜ್ಯೋತಿ ಜೋಷಿ ೩೪

೨. ನುಲಿಯ ಚಂದಯ್ಯನವರ ಸ್ಥಳ, ಕಾಲ ವಿಚಾರ • ಡಾ. ಜಯಶ್ರೀ ದಂಡೆ ೩೭

೩. 'ಗರುಡ ಸದಾಶಿವರಾಯರ ನಾಟಕಗಳಲ್ಲಿ ಸಾಮಾಜಿಕ ಸಮಸ್ಯೆಗಳ ಅನಾವರಣ ಮತ್ತು ನಿರ್ವಹಣೆ' • ಮಹಾಲಿಂಗ ಪೋಳ ೪೧

೪. ವಿಶಿಷ್ಟ ಸಾಹಿತಿ ಡಾ. ಸಿಂಪಿ ಲಿಂಗಣ್ಣ • ಡಾ. ಎಂ. ಎಸ್. ಮಾಗಣಗೇರಿ ೪೫

೫. ಹೈದ್ರಾಬಾದ ಕರ್ನಾಟಕ ಪ್ರದೇಶದ ಜಾನಪದ ಸಾಹಿತ್ಯ ಸಾಧಕರು • ಪ್ರೊ. ಬಿ. ಬಿ. ಡೆಂಗನವರ ೫೨

೬ "ವಚನ ಸಾಹಿತ್ಯದ ವಿಶಿಷ್ಟ ಶಬ್ದ ಭಂಡಾರ" • ಡಾ. ರೇಖಾ ಎಂ. ಜೋಗುಳ ೬೧

೭ ಆಧುನಿಕ ಕನ್ನಡ ಸಾಹಿತ್ಯದ ಚಳುವಳಿಗಳು • ಕಾಂಬಳೆ ದರಮಣ್ಣ ಭಗವಂತ ೭೨


Scanned with CamScanner

# ಹೈದ್ರಾಬಾದ ಕರ್ನಾಟಕ ಪ್ರದೇಶದ ಜಾನಪದ ಸಾಹಿತ್ಯ ಸಾಧಕರು

• ಪ್ರೊ. ಬಿ. ಬಿ. ಡೆಂಗನವರ

ಹೈದ್ರಾಬಾದ ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿ ವೈವಿಧ್ಯಮಯವಾಗಿದ್ದು, ಈ ಭಾಗದ ಸನ್ನತಿ, ಗುರುಸಣಗಿ, ಹುಣಸಗಿ, ಮಸ್ಕಿ, ಕೊಪ್ಪಳ, ಕಾಳಗಿ, ನಾಗಾವಿ, ಅರಳನೂರು, ಸೇಡಂ, ಪ್ರದೇಶಗಳು ಶಿಲಾಯುಗದ ಕುರುಹುಗಳಾಗಿವೆ. ಮೌರ್ಯರ ಕಾಲಕ್ಕೆ ಇವೆಲ್ಲವುಗಳು ಬೌದ್ಧಕೇಂದ್ರಗಳಾಗಿ ಕಂಗೊಳಿಸಿದ್ದವು. ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಲಚೂರಿಗಳು, ವಚನಕಾರರು, ತತ್ತ್ವಪದಕಾರರು, ಸೂಫಿಸಂತರು, ವಿಜಯನಗರ, ಬಹುಮನಿ ಮತ್ತು ನಿಜಾಮರು ಹೈದ್ರಾಬಾದ ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಯ ಬೆಳವಣಿಗೆಯ ಪರಂಪರೆಗೆ ಕೊಡುಗೆ ಸಲ್ಲಿಸಿದ್ದಾರೆ. ಕೃಷ್ಣಾ, ಭೀಮಾ, ಕಾರಂಜಾ, ಬೆಣ್ಣೆತೊರಾ ಮುಂತಾದ ನದಿಗಳು ನೈಸರ್ಗಿಕ ಸಂಪನ್ಮೂಲಗಳನ್ನು ಮತ್ತು ಇತಿಹಾಸವನ್ನು ಶ್ರೀಮಂತಗೊಳಿಸಿವೆ.

ಗುಲ್ಬರ್ಗಾದ ಏಳು ಗುಮ್ಮಟಗಳ ಕೋಟೆ, ನಾಗಾವಿಯ ವಿಶ್ವವಿದ್ಯಾಲಯ, ಬೀದರಿನ ಮದರಸಾ, ಮುದಗಲ್ ಮತ್ತು ರಾಯಚೂರಿನ ಕೋಟೆಕೊತ್ತಲಗಳು, ಹಂಪಿಯ ಸ್ಮಾರಕಗಳು, ದಕ್ಷಿಣ ಕಾಶಿಯೆಂದು ಪ್ರಸಿದ್ಧವಾಗಿರುವ ಕಾಳಗಿಯ ದೇವಾಲಯಗಳು ಹೈದ್ರಾಬಾದ ಕರ್ನಾಟಕದ ಧರ್ಮ, ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರತಿಬಿಂಬವಾಗಿವೆ. ಅಲ್ಲದೇ ನೃಪತುಂಗನ ಆಸ್ಥಾನಕವಿ ಶ್ರೀವಿಜಯನ 'ಕವಿರಾಜಮಾರ್ಗ' ಭೀಮಕವಿಯ 'ಬಸವಪುರಾಣ', ಆರನೇ ವಿಕ್ರಮಾದಿತ್ಯನ ಕಾಲದ ವಿಜ್ಞಾನೇಶ್ವರನು ರಚಿಸಿದ 'ಮಿತಾಕ್ಷರ'(ಹಿಂದೂ ಉತ್ಕೃಷ್ಟ ಕಾನೂನು ಗ್ರಂಥ), ಮಹಾವೀರಾಚಾರ್ಯರ 'ಗಣಿತಶಾಸ್ತ್ರ' ಆದಿಲ್‌ಶಾಹಿ ಕಾಲದ ರಫಿಉದ್ದಿನ್‌ಸಿರಾಜ್ ರಚಿಸಿದ 'ತಝುರೆಂತುಲ್ ಮುಲಕ್' ಎನ್ನುವ ಪರ್ಷಿಯನ್ ಕೃತಿ ಇತ್ಯಾದಿ ಗ್ರಂಥಗಳು ಹೈದ್ರಾಬಾದ ಕರ್ನಾಟಕ ಪ್ರದೇಶದ ಸಾಹಿತ್ಯ, ವಿಜ್ಞಾನ, ಕಲೆ ಮತ್ತು ಇತಿಹಾಸದ ಆಕರಗಳಾಗಿವೆ. ಬೌದ್ಧ, ಜೈನ, ವೈಷ್ಣವ, ವೀರಶೈವ ಮತ್ತು ಇಸ್ಲಾಂ ಧರ್ಮಗಳ ಸಂಗಮ ಈ ಹೈದ್ರಾಬಾದ ಕರ್ನಾಟಕ ಪ್ರದೇಶವಾಗಿದೆ. ಹನ್ನೆರಡನೇ ಶತಮಾನದಲ್ಲಿ ಸಮಾಜೋಧಾರ್ಮಿಕ ಕ್ರಾಂತಿಗೆ ಭಕ್ತಿ ಭಂಡಾರಿ ಬಸವಣ್ಣ, ಅಲ್ಲಮಪ್ರಭುವಿನ, ಅಧ್ಯಕ್ಷತೆಯಲ್ಲಿ ಅನುಭವ ಮಂಟಪವನ್ನು ಸ್ಥಾಪಿಸಿ ಇಡೀ ಮಾನವಕುಲವನ್ನು ಅಂತಃಕರುಣೆಯಿಂದ ಕೂಡಿದ ಕಾಯಕ ನಿಷ್ಠೆಯನ್ನು ಮೆರೆಯುವ ದಾಸೋಹದ ಪ್ರಭಾವಕ್ಕೆ ತಂದು ನಿಲ್ಲಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ.

ಶರಣ ಸಮೂಹದ ವಿಶೇಷ, ದಾಸಸಾಹಿತ್ಯ ಮತ್ತು ಸೂಫಿ ಧರ್ಮದ ಕಣಜವಾಗಿದೆ. ಇದೇ ರೀತಿ ಕನ್ನಡ, ಸಂಸ್ಕೃತ ಸಾಹಿತ್ಯದ ಮೇರುಕೃತಿಗಳಿಗೂ ಸ್ಪೂರ್ತಿತಾಣವಾಗಿದೆ. ಪಂಪ, ಪೊನ್ನ, ಶಿವಕೋಟ್ಯಾಚಾರ್ಯ, ಲಕ್ಷ್ಮೀಶ, ದೇವರದಾಸಿಮಯ್ಯ, ವಿಜಯದಾಸರು ತಮ್ಮ ಮೇರುಕೃತಿಗಳನ್ನು ನೀಡಿದ್ದು ಇದೇ ಪರಿಸರದಲ್ಲಿ. ಕಲಾಪ್ರಪಂಚದಲ್ಲಿ ಆಳಂದ-ಶಂಕರರಾವ್, ಎಸ್.ಎಂ. ಪಂಡಿತ, ಕೃಷ್ಣ-ಕಾಣಿಹಾಳ್, ಮುಂತಾದವರು ಹಾಗೆಯೇ ಕುಂಚಬ್ರಹ್ಮದಲ್ಲಿ ವ್ಹಿ.ಜಿ.ಅಂದಾನಿಯವರು, ಜಿ.ಎಸ್. ಖಂಡೇರಾವ್, ಕಲ್ಬುರ್ಗಿಯ ಐಡಿಯಲ್ ಫೈನ್ ಆರ್ಟ ಸಂಸ್ಥೆಯ ಮೂಲಕ ವಿಶ್ವವಿಖ್ಯಾತರಾಗಿದ್ದಾರೆ. ಕನ್ನಡ ಸಾಹಿತ್ಯ ಶ್ರೀಮಂತಿಕೆಯನ್ನು ಹೆಚ್ಚಿಸಿದ ಶ್ರೇಯಸ್ಸು ಹೈದ್ರಾಬಾದ ಕರ್ನಾಟಕ ಪ್ರದೇಶಕ್ಕೆ ಸಲ್ಲುತ್ತದೆ. ಪ್ರಥಮ ಲಾಕ್ಷಣಿಕ ಕೃತಿ ಕವಿರಾಜಮಾರ್ಗ ನೀಡಿದ ಹಿರಿಮೆ ಕಲಬುರ್ಗಿಯ ಮಾನ್ಯಖೇಟಪುರದ್ದು. ಶಿಷ್ಟಕಾವ್ಯ ಸೃಷ್ಟಿಯ ಜೊತೆಗೆ ಜನಪದ ಸಾಹಿತ್ಯದಲ್ಲೂ ಹೆಗ್ಗಳಿಕೆ ಸಾಧಿಸಿದ ಜಿಲ್ಲೆ ಇದಾಗಿದೆ. ಹೆಸರಾಂತ ಜನಪದ ಕವಿ ಕಲಾಕಾರರನ್ನು, ಸಾಹಿತ್ಯಸಾಧಕರನ್ನು ಗುರುತಿಸಬಹುದಾಗಿದೆ.


ISSN : 2320-0391


Scanned with CamScanner

"ಪದನರಿದು ನುಡಿಯಲುಂ ನುಡಿ
ದುದನರಿದಾರಯಲು ಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುರಿತು
ದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್"

ಎಂದು ಹೇಳಿದ ಇಲ್ಲಿನ ಕವಿಯ ಮಾತು ನೇರವಾಗಿ ಜನಪದ ಸಾಹಿತ್ಯ, ಸಂಪ್ರದಾಯ, ಕವಿ ಕಲಾವಿದರನ್ನು ಕುರಿತು ಆಡಿದ ಹೆಗ್ಗಳಿಕೆಯ ಮಾತಾಗಿದೆ. ಹೈದರಾಬಾದ ಕರ್ನಾಟಕ ಪ್ರದೇಶವು ಜನಪದ ಸಾಹಿತ್ಯ ಶ್ರೀಮಂತಿಕೆಯಲ್ಲಿ ಹೆಗ್ಗಳಿಕೆ ಸಾಧಿಸಿದೆ. ಜಾನಪದ ಕವಿ ಕಾವ್ಯ ಕಲಾವಿದರ ತವರುಮನೆಯಾಗಿದೆ. ಹೈದರಾಬಾದ ಕರ್ನಾಟಕದ ಜಿಲ್ಲೆಗಳಾದ ಬೀದರಿನ ಜನಪದ ಭಾಷೆಯ ಮೇಲೆ ಮರಾಠಿ ಪ್ರಭಾವ, ಕಲ್ಬುರ್ಗಿಯ ಜನಪದ ಭಾಷೆಯ ಮೇಲೆ ಉರ್ದು ಭಾಷೆಯ ಪ್ರಾಬಲ್ಯವನ್ನು ಗುರುತಿಸಿದರೆ ರಾಯಚೂರಿನ ಜನಪದ ಭಾಷೆಯ ಮೇಲೆ ತೆಲುಗಿನ ಪ್ರಭಾವ, ಬಳ್ಳಾರಿ ಜನಪದ ಭಾಷೆಯ ಮೇಲೆ ಕೂಡ ತೆಲುಗು ಭಾಷೆಯ ಪ್ರಭಾವವನ್ನು ಗುರುತಿಸಬಹುದಾಗಿದೆ. ಜಾನಪದ ಇಂದು ವಿಶ್ವವ್ಯಾಪಿಯಾಗಿದೆ. ಜನಪದರ ಏಳುಬೀಳುಗಳು ಜೀವನದೊಂದಿಗೆ ಹಾಸುಹೊಕ್ಕಾಗಿ ಬೆರೆತುಕೊಂಡು ಬಂದಿವೆ. ಮಾನವ ಸಂಸ್ಕೃತಿಯ ತಾಯಿ ಬೇರುಗಳು ಜನಪದ ಸಾಹಿತ್ಯದಲ್ಲಿ ಅಡಕವಾದುದನ್ನು ಜಾನಪದ ವಿದ್ವಾಂಸರು, ಮಾನವಶಾಸ್ತ್ರ, ಭಾಷಾಶಾಸ್ತ್ರ, ಸಮಾಜ ಶಾಸ್ತ್ರಗಳ, ಹಿನ್ನೆಲೆಯಲ್ಲಿ ಚರ್ಚಿಸಿ ಅಭ್ಯಸಿಸಿದ್ದಾರೆ. ಈ ಪ್ರದೇಶದಲ್ಲಿ ಜಾನಪದ ವಿಜ್ಞಾನದ ಸೊಗಡು, ಸಂಸ್ಕೃತಿ ತುಂಬಿ ನಿಂತಿದೆ. ಹೆಸರಾಂತ ಜಾನಪದ ಸಾಹಿತಿ ವಿದ್ವಾಂಸ ಸಾಧಕರು ಜಾನಪದ ಸಾಹಿತ್ಯದ ಶ್ರೇಷ್ಟತೆಯನ್ನು ಮೆರೆದ ಮಹಾನುಭಾವರಿದ್ದಾರೆ.

ಜಾನಪದ ಸಾಹಿತ್ಯವನ್ನು ಸಂಗ್ರಹಿಸಿ ಸಂಪಾದಿಸುವುದರ ಜೊತೆಗೆ ವಿಮರ್ಶೆ-ಸಂಶೋಧನೆಕಾರ್ಯ ಈ ಪ್ರದೇಶದಲ್ಲಿ ಪ್ರಾರಂಭವಾಯಿತು. ಹಲಸಂಗಿ ಗೆಳೆಯರ ಬಳಗ ಕೈಕೊಂಡ ಜನಪದ ಸಂಗ್ರಹಕಾರ್ಯದ ಪ್ರಭಾವ ಪ್ರೇರಣೆಗೊಳಗಾಗಿ ಹೈದರಾಬಾದ ಕರ್ನಾಟಕ ಜನಪದ ಸಾಹಿತ್ಯ ಸಂಗ್ರಹಕಾರರ ಒಂದು ಗುಂಪು ಹೊರಬಂದಿತು. ಇದೇ ಸಂದರ್ಭದಲ್ಲಿ ಉತ್ತರಕರ್ನಾಟಕದ ಏಳು ಜಿಲ್ಲೆಗಳ ಜನಪದ ಸಾಹಿತ್ಯ ಸಂಗ್ರಹ ಸಂಪಾದನೆ ಪ್ರಕಟಣಾಯೋಜನೆಯೊಂದು ೧೯೭೭ರಲ್ಲಿ ಯು.ಜಿ.ಸಿ. ನೆರವಿನೊಂದಿಗೆ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವಾದ ಗುಲ್ಬರ್ಗಾದ ಕನ್ನಡ ವಿಭಾಗದಲ್ಲಿ ಸ್ಥಾಪನೆಯಾಯಿತು. ಇದಕ್ಕೆ ಕನ್ನಡ ವಿಭಾಗದ ಅಂದಿನ ಮುಖ್ಯಸ್ಥರು, ಜಾನಪದ ವಿದ್ವಾಂಸರೂ ಆದ ಡಾ. ಬಿ.ಬಿ.ಹೆಂಡಿ, ಅಧ್ಯಕ್ಷರಾಗಿ ಡಾ, ಎಂ.ಎಸ್.ಲಠ್ಠೆ, ಡಾ.ಎಂ.ಜಿ.ಬಿರಾದಾರ, ಡಾ.ಬಸವರಾಜ ಪೊಲೀಸ ಪಾಟೀಲ ಕೆಲಕಾಲ ಡಾ. ಬಿ.ವ್ಹಿ. ಮಲ್ಲಾಪುರ, ಡಾ.ವೀರಣ್ಣ ದಂಡೆ, ಪ್ರೊ.ಸೂಗಯ್ಯ ಹಿರೇಮಠ ಅವರು ಸಹಾಯಕ ಸಂಶೋಧಕರಾಗಿ ನೇಮಕಗೊಂಡರು. ಸತತ ನಾಲ್ಕು ವರ್ಷ ೧೯೭೭ರಿಂದ ೧೯೮೦ರ ವರೆಗೆ ನಡೆದ ಸಂಗ್ರಹ ಕಾರ್ಯದಲ್ಲಿ ಅಪಾರ ಸಾಹಿತ್ಯ ಸಂಪತ್ತು ಸಂಗ್ರಹವಾಯಿತು. ಗುಲ್ಬರ್ಗ ವಿಶ್ವವಿದ್ಯಾಲಯದ ಮೂಲಕ ನಡೆದ ಈ ಕಾರ್ಯ ಜನಪದ ಸಂಗ್ರಹದ ಕಣಜವಾಯಿತು, ಮತ್ತು ದಾಖಲೆ ನಿರ್ಮಿಸಿತು. ಜನಪದ ಸಾಹಿತ್ಯದ ಸಾವಿರಾರು ಗದ್ಯ, ಪದ್ಯ, ಮಿಶ್ರ ಸಾಹಿತ್ಯ ಪ್ರಕಾರಗಳನ್ನು ಸಂಗ್ರಹಿಸಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಶೇಖರಿಸಿ ಇಡಲಾಗಿದೆ. ಮುಂಬರುವ ಸಂಗ್ರಹಕಾರರಿಗೆ, ಸಂಶೋಧಕರಿಗೆ, ವಿಮರ್ಶಕರಿಗೆ, ವಿದ್ಯಾರ್ಥಿಗಳಿಗೆ ದಾರಿದೀಪವಾಗಿ ಪರಿಣಮಿಸಿತು.

ಈ ಯೋಜನೆಯಡಿಯಲ್ಲಿ ಸಂಪೂರ್ಣವಾಗಿ ಸಂಗ್ರಹವಾದದ್ದು ಹೈದರಾಬಾದ ಕರ್ನಾಟಕ ಪ್ರದೇಶದ ಸಂಗ್ರಹಕಾರರಿಗೆ, ಸಂಶೋಧಕರಿಗೆ ತವನಿಧಿಯೆನಿಸಿತು. ಈ ಸಂಗ್ರಹದಡಿ ಈಗಾಗಲೇ ಮೂರು ಪ್ರಮುಖ ಕೃತಿಗಳು ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಪ್ರಕಟಗೊಂಡಿವೆ. ಅವುಗಳೆಂದರೆ ಆಯ್ದ ಜನಪದ ಕಥನ ಗೀತೆಗಳು, ಹರದೇಶಿ ನಾಗೇಶಿ ಹಾಗೂ ನೂರೆಂಟು ಜನಪದ ಕಥೆಗಳು, ಉತ್ತರ ಕರ್ನಾಟಕದ ಜನಪದ ಸಾಹಿತ್ಯ ಸಂಗ್ರಹ-ಸಂಪಾದನೆ ಪ್ರಕಟನಾ ಯೋಜನೆಯಡಿ ಕಾರ್ಯನಿರ್ವಹಿಸಿ ಅದರ ನೇರ ಪ್ರಭಾವಕ್ಕೊಳಗಾಗಿ ಜನಪದ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿ ತಮ್ಮ ಅಧ್ಯಯನ, ಅಧ್ಯಾಪನ, ಸಂಶೋಧನಾ ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳುತ್ತಾ ಹಲವು ಕೃತಿಗಳು ಪ್ರಕಟವಾದವು. ಜಾನಪದವನ್ನು ಸಂಶೋಧನೆಯ ವಿಷಯವನ್ನಾಗಿ ಆರಿಸಿಕೊಳ್ಳುವ ಒಲವು ಈ ಭಾಗದ ಸಂಶೋಧಕರಲ್ಲಿ ಮೂಡತೊಡಗಿತು. ಜಗತ್ತಿನಲ್ಲಿರುವುದೆಲ್ಲ ಜಾನಪದದಲ್ಲಿದೆ. ವಿಜ್ಞಾನಪೂರ್ವಯುಗದ ವಿಜ್ಞಾನ ಎನ್ನುತ್ತ ಹಲವಾರು ಸಂಶೋಧಕರು ಜಾನಪದ ಕ್ಷೇತ್ರದತ್ತ ದಾವಿಸತೊಡಗಿದರು. ದೇಶ ದೇಶಗಳ, ರಾಜ್ಯ-ರಾಜ್ಯಗಳ, ಪ್ರದೇಶದಿಂದ- ಪ್ರದೇಶಗಳ ನಡುವಿನ ಭಿನ್ನತೆ ಹಾಗೂ ಸಾಮ್ಯತೆಯನ್ನು ತೌಲನಿಕವಾಗಿ ನೋಡುವ ದೃಷ್ಟಿಕೋನ ಸಂಶೋಧಕರಲ್ಲಿ ಮೂಡತೊಡಗಿತು. ಇದರ ಪರಿಣಾಮವಾಗಿ ಹೈದರಾಬಾದ ಕರ್ನಾಟಕ ಸಂಶೋಧಕರ ಸಂಶೋಧನೆಗೆ


ISSN : 2320-0391

Scanned with CamScanner

ಆಸಕ್ತಿಯ ಕ್ಷೇತ್ರವಾಗಿ ತೆರೆದುಕೊಂಡಿತು. ಇಂತಹ ಅದ್ವಿತೀಯವಾದ ಮಹಾಕಾರ್ಯದಲ್ಲಿ ತೊಡಗಿಸಿಕೊಂಡು ಅವಿರತವಾಗಿ ಪರಿಶ್ರಮಿಸಿದವರಲ್ಲಿ ಜಾನಪದದ ಹಿರಿಯ ವಿದ್ವಾಂಸರಾದ ಡಾ. ಬಿ.ಬಿ. ಹೆಂಡಿಯವರ ಸಾಧನೆಯ ಕುರಿತು ಇಲ್ಲಿ ಸ್ಮರಿಸಲೇಬೇಕು.

ಡಾ. ಬಿ. ಬಿ. ಹೆಂಡಿಯುವರು ಕನ್ನಡದ ಗಣ್ಯಪ್ರಾಧ್ಯಾಪಕರಲ್ಲಿ ಒಬ್ಬರಾಗಿದ್ದಾರೆ. ವೀರಶೈವ ಸಾಹಿತ್ಯ, ಕಾವ್ಯಮೀಮಾಂಸೆ ಹಾಗೂ ಜಾನಪದ ಕ್ಷೇತ್ರದಲ್ಲಿ ತುಂಬಾ ಆಸಕ್ತಿಯಿಂದ ಶ್ರದ್ಧೆಯಿಂದ ಈ ಕ್ಷೇತ್ರದಲ್ಲಿ ದುಡಿದು ಆ ಕ್ಷೇತ್ರಗಳಿಗೆ ನ್ಯಾಯವನ್ನು ಒದಗಿಸಿದ ಪ್ರಬುದ್ಧ ಮತ್ತು ಪ್ರೌಢ ವಿದ್ವಾಂಸರಾಗಿದ್ದಾರೆ. ಬಾಗಲಕೋಟೆಯ ಬಸವೇಶ್ವರ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದ ಹೆಂಡಿಯವರು ಕೆಲವು ದಿನಗಳಾದ ಮೇಲೆ ಹುನಗುಂದದ ಪದವಿ ಕಾಲೇಜಿನ ಪ್ರಾಚಾರ್ಯರಾಗಿ ದಕ್ಷ ಆಡಳಿತಗಾರರಾಗಿ ಕಾರ್ಯನಿರ್ವಹಿಸಿದ ಅನುಭವ ಇವರದಾಗಿದೆ. ನಂತರದಲ್ಲಿ "ಹರಿಹರನ ವ್ಯಕ್ತಿತ್ವ ಮತ್ತು ಕವಿತ್ವ" ಎಂಬ ವಿಷಯದ ಕುರಿತು ಸಂಶೋಧನಾ ಮಹಾಪ್ರಬಂಧವನ್ನು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿ ಪಿ.ಎಚ್.ಡಿ.ಪದವಿ ಪಡೆದರು. ಇವರ ಪ್ರತಿಭೆ ಪಾಂಡಿತ್ಯವನ್ನು ಗಮನಿಸಿದ ಕರ್ನಾಟಕ ವಿಶ್ವವಿದ್ಯಾಲಯವು ಇವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠಕ್ಕೆ ಆಯ್ಕೆಮಾಡಿತು. ಅಲ್ಲಿ ಕೇವಲ ಒಂದು ವರ್ಷ ಮಾತ್ರವಿದ್ದು ಮುಂದೆ ೧೯೭೦ರಲ್ಲಿ ಗುಲ್ಬರ್ಗಾದ ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಆಗಮಿಸಿ ಕಲಾನಿಕಾಯದ ಡೀನರಾಗಿ, ಸಿಂಡಿಕೇಟ್ ಸದಸ್ಯರಾಗಿ ಹಲವು ಬಗೆಯ ಹುದ್ದೆಗಳನ್ನು ಅಲಂಕರಿಸಿ ಪ್ರಾಮಾಣಿಕವಾದ ಸೇವೆಯನ್ನು ಸಲ್ಲಿಸಿದರು. ಹೈದರಾಬಾದ ಕರ್ನಾಟಕ ಪ್ರದೇಶದ ಜನಪದ ಸಾಹಿತ್ಯವನ್ನು ಸಮಗ್ರವಾಗಿ ಸಂಗ್ರಹಿಸುವ ನೇತೃತ್ವವನ್ನು ವಹಿಸಿದ ಶ್ರೀಯುತರು ಬಹುಮಹತ್ವದ ಕಾರ್ಯವನ್ನು ಮಾಡಿದ್ದಾರೆ. ಜನಪದ ಸಾಹಿತ್ಯ ಕ್ಷೇತ್ರದ ಕೃಷಿಯ ಉದ್ಘಾಟನೆಯೂ ಇವರಿಂದಲೇ ಆಯಿತೆಂದು ಹೇಳಿದರೆ ಅತಿಶಯೋಕ್ತಿಯೆನಲ್ಲ. ಹೈದರಾಬಾದ ಕರ್ನಾಟಕದ ಸಮಗ್ರ ಜನಪದ ಸಾಹಿತ್ಯವನ್ನು ಸಂಗ್ರಹಿಸುವ ಯೋಜನೆಯನ್ನು ಇವರು ಡಾ. ಎಂ.ಎಸ್. ಲಠ್ಠೆ ಹಾಗೂ ಡಾ. ಮ.ಗು. ಬಿರಾದಾರ ಅವರ ಜೊತೆಗೂಡಿ ಪೂರೈಸಿದ್ದಾರೆ. ಕುಮಾರಸಂಭವ, ಹರದೇಶಿ-ನಾಗೇಶಿ, ಲಾವಣಿ-ಗೀ ಗೀ ಪದಗಳು, ಆಯ್ದ ಕಥನ ಗೀತೆಗಳು, ನೂರೊಂದು ಕಥೆಗಳು ಮುಂತಾದ ಕೃತಿಗಳನ್ನು ಸ್ನೇಹಿತರೊಂದಿಗೆ ಸೇರಿ ಹೊರತಂದಿದ್ದಾರೆ.

ಬಯಲಾಟ, ಡೊಳ್ಳಿನಹಾಡು, ಜನಪದ ಕಥೆ, ಲಾವಣಿ-ಗೀ ಗೀ ಪದಗಳು ಮುಂತಾದ ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಡಾ. ಹೆಂಡಿಯವರು ಆಳವಾಗಿ ಅಧ್ಯಯನ ನಡೆಸಿ ಮೌಲಿಕವಾದ ಹಲವಾರು ಸಂಶೋಧನ ಲೇಖನಗಳನ್ನು ಬರೆದಿರುವರು ಅವು ಜನಪದ ಲೇಖಕರಿಗೆ ಆಕರಗಳಾಗಿವೆ. ಡಾ. ಹೆಂಡಿಯವರು ವ್ಯಕ್ತಿ ಚರಿತ್ರೆಗಳನ್ನು ಬರೆಯುವಲ್ಲಿ ಸಿದ್ಧಹಸ್ತರು. ಅವರು ಬರೆದ 'ಬಸವೇಶ್ವರ' ಹಾಗೂ 'ಬಾಳು ಬೆಳಗಿದ ಮಹಾತ್ಮರು' ಕೃತಿ ತುಂಬಾ ಪ್ರಸಿದ್ಧಿಯನ್ನು ಪಡೆದಿವೆ. 'ಪಾಶ್ಚಾತ್ಯ ಕಾವ್ಯಮೀಮಾಂಸೆ' ಕೃತಿ ಕಾವ್ಯಮೀಮಾಂಸೆ ಕ್ಷೇತ್ರಕ್ಕೂ ಅವರು ನೀಡಿದ ಕೊಡುಗೆ ಮೌಲಿಕವಾದುದಾಗಿದೆ. ಕೃತಿ ಗಾತ್ರದಲ್ಲಿ ತುಂಬಾಚಿಕ್ಕದಾದರೂ ತುಂಬಾ ಮಹತ್ವದ ಪಾಶ್ಚಾತ್ಯ ಚಿಂತಕರ ಮೌಲಿಕ ಗ್ರಂಥವಾಗಿದೆ.

ಡಾ. ಹೆಂಡಿಯವರು ಕನ್ನಡ ಸಂಪಾದನಾ ಸಾಹಿತ್ಯ ಕ್ಷೇತ್ರಕ್ಕೂ ತಮ್ಮದೇ ಆದ ಮಹತ್ವದ ಕೊಡುಗೆಯನ್ನು ನೀಡಿರುವದು ಸ್ಮರಣೀಯ. ಅವರು ಸಂಪಾದಿಸಿ ಪ್ರಕಟಿಸಿದ ನಾಗಚಂದ್ರನ 'ಮಲ್ಲಿನಾಥ ಪುರಾಣ' ಹಾಗೂ 'ದೀಕ್ಷಾಬೋಧೆ' ಮಹತ್ವದ ಕೃತಿಗಳಾಗಿವೆ. ಇವರ ದೀಕ್ಷಾಬೋಧೆ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಇವರಿಗೆ ಜಾನಪದ ತಜ್ಞ ಪ್ರಶಸ್ತಿ ನೀಡಿ ಗೌರವಿಸಿದೆ. ಕರ್ನಾಟಕ ವಿಶ್ವವಿದ್ಯಾಲಯ ನಡೆಸುವ ಅಖಿಲಭಾರತ ಜಾನಪದ ವಿಚಾರಸಂಕಿರಣವೊಂದರ ಅಧ್ಯಕ್ಷತೆಯ ಗೌರವವನ್ನು ನೀಡಿ ಇವರೊಬ್ಬ ಈ ನಾಡು ಕಂಡ ಶ್ರೇಷ್ಠ ಜಾನಪದ ವಿದ್ವಾಂಸರೆಂಬುದನ್ನು ನಾಡಿಗೆ ಪರಿಚಯಿಸಿದೆ.

**ಡಾ.ಮ.ಗು. ಬಿರಾದಾರ :** ಡಾ. ಮ. ಗು. ಬಿರಾದಾರರು ನಾಡಿನ ಪ್ರಮುಖ ವಿದ್ವಾಂಸರಲ್ಲೊಬ್ಬರು, ಪ್ರತಿಭಾನ್ವಿತ ಪ್ರಾಧ್ಯಾಪಕರು, ದಕ್ಷ ಆಡಳಿತಗಾರರು, ಚತುರ ಮಾತುಗಾರರು, ಜೊತೆಗೆ ಕವಿಗಳು, ಕತೆಗಾರರು, ಸಂಶೋಧಕರು, ವಿಮರ್ಶಕರು, ನಾಟಕಕಾರರು, ಸಂಪಾದಕರು, ಸಮರ್ಥ ನಟರು ಅಂತಃಕರಣದ ಸ್ನೇಹಜೀವಿಗಳು, ಹಾಸ್ಯಗಾರರು, ಎಲ್ಲರೊಂದಿಗೆ ನಗುನಗುತ್ತಾ ಹಿರಿಯ ಕಿರಿಯರೆಂಬ ಭೇದಭಾವವಿಲ್ಲದೆ ಬೆರೆಯುವ ಸಹಜ ಸ್ವಭಾವದ ಡಾ. ಮ.ಗು. ಅವರ ಸರಳ ಸ್ವಭಾವಕ್ಕೆ ಎಂಥವರು ಮನಸೋಲದಿರರು ಅಂತಹ ಆಕರ್ಷಕ ಸೂಜಿಗಲ್ಲಿನ ಅವರ ವ್ಯಕ್ತಿತ್ವಕ್ಕೆ ಸಾಕಷ್ಟು ಜನ


ISSN : 2320-0391

ಮಾರುಹೋಗಿದ್ದಾರೆ. ಅವರ ವಿದ್ಯಾರ್ಥಿಯಾಗಿ ತುಂಬಾ ಹತ್ತಿರದಿಂದ ಕಂಡು ಅವರ ವ್ಯಕ್ತಿತ್ವಕ್ಕೆ ಮನಸೋತವರಲ್ಲಿ ನಾನು ಒಬ್ಬ. ಇಂತಹ ಸರಳ ಸ್ವಭಾವದ ಡಾ. ಮ. ಗು. ಬಿರಾದಾರ ಕುರಿತು ಅವರ ಸಾಧನೆಯ ಬಗ್ಗೆ ನಾಲ್ಕು ನುಡಿ ಬರೆಯುವದಕ್ಕೆ ನನಗೆ ತುಂಬಾ ಹೆಮ್ಮೆ ಮತ್ತು ಅಭಿಮಾನವೆನಿಸುತ್ತದೆ. ಡಾ.ಬಿರಾದಾರ ಅವರು ಮೂವತ್ತಕ್ಕೂ ಹೆಚ್ಚು ಕೃತಿಗಳನ್ನು, ನೂರಕ್ಕೂ ಮೀರಿದ ವಿದ್ವತ್‌ಪೂರ್ಣ ಲೇಖನಗಳನ್ನು, ಇನ್ನೂರಕ್ಕೂ ಮೀರಿ ಸಾಹಿತ್ಯ ಸಂಸ್ಕೃತಿ ಕುರಿತಂತೆ ಉಪನ್ಯಾಸಗಳನ್ನು ನೀಡಿ ಕನ್ನಡ ಸಾರಸ್ವತ ಲೋಕದಲ್ಲಿ ಪ್ರಸಿದ್ಧರೆನಿಸಿದ್ದಾರೆ. ಡಾ. ಬಿರಾದಾರ ಅವರ ಸೃಜನಶೀಲ ಕೃತಿಗಳಿಗಿಂತ ಜಾನಪದೀಯ ಕೃತಿಗಳ ಜೀವಸತ್ವ ಹೆಚ್ಚು ಪರಿಣಾಮಕಾರಿಯಾಗಿವೆ. ಏಕೆಂದರೆ ದೇಸಿಸಂಸ್ಕೃತಿಯ ಗ್ರಾಮೀಣ ಸೊಗಡಿನ ಪರಿಸರದಲ್ಲಿ ತಾಯ ಮಡಿಲಿನಿಂದಲೇ ಜಾನಪದವನ್ನು ಹಾಸಿಹೊದ್ದವರು, ಜಾನಪದ ಅವರ ಉಸಿರಾಗಿದೆ. ಇವರು ಮೂಲತಃ ಬಿಜಾಪುರ ಜಿಲ್ಲೆಯ ಬಬಲೇಶ್ವರದವರು ಶ್ರೀ ಗುರನಗೌಡ ರುದ್ರಮ್ಮನವರ ಶರಣ ದಂಪತಿಗಳ ಪುಣ್ಯಗರ್ಭದಲ್ಲಿ ೧೫-೦೩-೧೯೩೩ ರಂದು ಜನಿಸಿದರು. ಒಕ್ಕಲುತನ ಕುಟುಂಬದಿಂದ ಬಂದವರಾದ್ದರಿಂದ ಜಾನಪದಕ್ಕೂ ಅವರಿಗೂ ಹುಟ್ಟಿನ ನಂಟು ನಿಸರ್ಗದ ಜೊತೆಗೂಡಿ ಆಡದ ಆಟವಿಲ್ಲ, ಹಾಡದ ಹಾಡಿಲ್ಲ, ಬಯಲಾಟ, ಲಾವಣಿ, ಹೋಳಿ, ಹಂತಿ, ಬುಲೇರಿ ಹಾಡುಗಳನ್ನು ಹಾಡಿದ ಶ್ರೀಮಂತ ಅನುಭವದ ಜೊತೆ ನಿತ್ಯ ಒಮ್ಮನಜೋಳ ಬೀಸುವ ಕಲ್ಲಿಗೆ ಮುಕ್ಕು ಹಾಕಿ ಅಮ್ಮನ ಜೊತೆ ಹಾಡಿಗೆ ಧ್ವನಿಗೂಡಿಸಿದವರು.

ಡಾ. ಬಿರಾದಾರ ಅವರಿಗೆ ಒಳ್ಳೆಯ ಗುರುಪರಂಪರೆಯಿದೆ. ಅವರ ಕಾಲದ ಸಾಹಿತ್ಯ ದಿಗ್ಗಜರೆನಿಸಿಕೊಂಡ ಗುರುಗಳ ಗುರು ಎಂಬ ಅಭಿದಾನಕ್ಕೆ ಭಾಜನರಾದ ಡಾ.ಎಚ್.ಟಿ. ಸಾಸನೂರ, ಡಾ. ಬಿ.ಟಿ. ಸಾಸನೂರ, ಪ್ರೊ. ಎಚ್.ಕೆ.ಲಗಳಿಯವರ ಮಾರ್ಗದರ್ಶನ ಪ್ರತಿಫಲವಾಗಿ ಕನ್ನಡದಲ್ಲಿ ಎಂ.ಎ. ಪಿ.ಎಚ್.ಡಿ. ಪಡೆದುಕೊಂಡು ೧೯೬೪ ರಲ್ಲಿ ಕಲಬುರ್ಗಿಯ ಶರಣಬಸವೇಶ್ವರ ಪದವಿ ಮಹಾವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ವೃತ್ತಿ ಜೀವನವನ್ನು ಆರಂಭಿಸಿದ ಬಿರಾದಾರ ತಮ್ಮ ವಾಕ್‌ಚಾತುರ್ಯದಿಂದ, ಜನಪದ ಹಾಡುಗಾರಿಕೆ, ಸೃಜನಶೀಲ ಸಂಸ್ಕೃತಿಗಳೆಲ್ಲದರಿಂದ ಕಲಬುರ್ಗಿ ಪರಿಸರದಲ್ಲಿ ಅತ್ಯುತ್ತಮ ಪ್ರಾಧ್ಯಾಪಕರೆಂದು ಪ್ರಸಿದ್ಧರಾದರು. ಈ ನೆಲದ ಋಣದಿಂದ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿ ವಿಶ್ವವಿದ್ಯಾಲಯದ ಮೆಟ್ಟಲನ್ನೇರುವ ಸೌಭಾಗ್ಯ ಇವರಿಗೆ ಒದಗಿಬಂದಿತು. ಕೆಲವು ವರ್ಷ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿ ಮರಳಿ ಕಲಬುರ್ಗಿಯ ಸ್ನಾತಕೋತ್ತರ ಕೇಂದ್ರಕ್ಕೆ ಬಂದು ಕನ್ನಡ ಅಧ್ಯಯನ ಸಂಸ್ಥೆಯನ್ನು ಬೆಳೆಸುವಲ್ಲಿ ಅವರ ಪಾತ್ರ ತುಂಬಾ ಹಿರಿದಾಗಿದೆ. ಅವರು ಗುಲ್ಬರ್ಗಾ ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲ್, ಸಿನೆಟ್, ಸಿಂಡಿಕೇಟ್ ಸದಸ್ಯರಾಗಿ, ಪ್ರಸಾರಾಂಗದ ನಿರ್ದೇಶಕರಾಗಿ, ಕಲಾನಿಕಾಯದ ಡೀನರಾಗಿ, ಕಾರ್ಯನಿರ್ವಹಿಸಿದ್ದಾರೆ. ವಿಶೇಷವಾಗಿ ವಿಶ್ವವಿದ್ಯಾಲಯದಲ್ಲಿ ಸಂಪಾದನಾ, ಸಂಶೋಧನಾ, ಪ್ರಕಟಣಾ ವಿಭಾಗದ ಹಿರಿಯ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಕನ್ನಡ ಸಾಹಿತ್ಯ ಪರಿಷತ್ತು, ಶರಣ ಸಾಹಿತ್ಯ ಪರಿಷತ್ತು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿ ಹೀಗೆ ಬೆಂಗಳೂರಿನಿಂದ ಮೈಸೂರವರೆಗೂ ಇವರ ಕಾರ್ಯವ್ಯಾಪ್ತಿ ಹಬ್ಬಿತ್ತು. ನಿತ್ಯ ಪಾಠ ಪ್ರವಚನದ ಮಧ್ಯೆ ವಿಶೇಷವಾಗಿ ಸಂಶೋಧನಾ ಕ್ಷೇತ್ರದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡವರು. ಕಲ್ಬುರ್ಗಿ ವಿಭಾಗದ ಜನಪದ ಸಂಸ್ಕೃತಿಯನ್ನು ದಾಖಲಿಸುವಲ್ಲಿ ಮಹತ್ವದ ಕಾರ್ಯವನ್ನು ಎಸಗಿದ್ದಾರೆ. ಚೀಲಗಟ್ಟಲೆ ಹಸ್ತಪ್ರತಿಗಳನ್ನು ಸಂಗ್ರಹಿಸಿದರು.ಅವುಗಳನ್ನು ವಿಂಗಡಿಸಿ, ವಿಶ್ಲೇಷಿಸಿ, ಸಂಪಾದಿಸಿ, ಸಾರಸ್ವತಲೋಕಕ್ಕೆ ನೀಡಿದರು ಗುಲ್ಬರ್ಗ ಮತ್ತು ಬೀದರ ಜಿಲ್ಲೆಯ ಆಡುಭಾಷೆಗಳ ಪ್ರಕಾರಗಳು ಎಂಬ ವಿಷಯ ಕುರಿತು ಸಂಶೋಧನೆ ನಡೆಸಿದ್ದಾರೆ. ಶ್ರೀಯುತರು ಜಾನಪದ ಕುರಿತಾದ 'ಜಾನಪದ ಸಮಾಲೋಚನೆ' ಜಾನಪದ ಜೀವಾಳ ಮತ್ತು 'ಪಳೆಯುಳಿಕೆಗಳು' ಎಂಬ ಕೃತಿಗಳಲ್ಲಿ ಜಾನಪದ ಸಂಬಂಧಿತ ಸಂಶೋಧನಾ ಲೇಖನಗಳಿವೆ. 'ಪಳೆಯುಳಿಕೆಗಳ ಕುರಿತ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಪ್ರಕಟಿಸಿದ್ದಾರೆ. ಜಾನಪದ ಜೀವಾಳ ಕೃತಿಗೆ ಪುಸ್ತಕ ಪ್ರಶಸ್ತಿ ದೊರೆತಿದೆ. ೧೯೯೫ ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ 'ಜಾನಪದ ತಜ್ಞ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಇವರು ಸಂಶೋಧನಾ ಲೇಖನಗಳನ್ನೆಲ್ಲ ಸೇರಿಸಿ ೨೦೦೮ ರಲ್ಲಿ ಬೆಳೆ-೧ ಎಂಬ ಕೃತಿಯೊಂದನ್ನು ಹೊರತಂದಿದ್ದಾರೆ. ಇದು ಜಾನಪದಿಯ ಕ್ಷೇತ್ರಕ್ಕೆ ಒಂದು ಅಮೂಲ್ಯವಾದ ಕೊಡುಗೆಯಾಗಿದೆ. ಲೇಖಕರ ಐವತ್ತು ವರ್ಷಗಳ ಪ್ರಯತ್ನದ ಫಲ ಸಂಶೊಧನಾ ಅನುಭವ ಅಲ್ಲದೆ ಅಖಿಲ ಕರ್ನಾಟಕ ಮಟ್ಟದ ಅನೇಕ ಜನಪದ ಸಮ್ಮೇಳನಗಳಲ್ಲಿ ಸಾದರಪಡಿಸಿದ ವಿದ್ವತ್ ಪೂರ್ಣವಾದ ಪ್ರಭಂದಗಳ ಗುಚ್ಚ ಇದಾಗಿದೆ.



Scanned with CamScanner

ಅವರ ಅಪಾರವಾದ ಅಧ್ಯಯನ ಆಳವಾದ ಅನುಭವ ವ್ಯಾಪಕವಾದ ವ್ಯಾಕರಣದಿಂದ ಸಾಧ್ಯವಾದ ಜಾನಪದಿಯ ಕುರಿತಾದ ಪ್ರಭುತ್ವ ಮತ್ತು ಪರಿಣತಿಯನ್ನು ಇಲ್ಲಿನ ಅನೇಕ ಲೇಖನಗಳು ಮನಗಾಣಿಸುತ್ತವೆ. ಇವರ ಉತ್ತರ ಕರ್ನಾಟಕದ ಜಾನಪದ ಸಾಹಿತ್ಯ ಪ್ರಕಾರಗಳು ಮೂವತ್ತಾರು ಪುಟದ ಲೇಖನವಾಗಿದ್ದು, ಕಥೆ, ಗಾದೆ, ಒಡಪು, ಹಾಡು, ಮತ್ತು ಬಯಲಾಟ ಎಂಬ ಪ್ರಮುಖ ಪ್ರಕಾರಗಳು ಮತ್ತೆ ಒಳರೂಪಗಳನ್ನು ಉದಾಹರಣೆಸಮೇತ ವಿಶ್ಲೇಷಿಸುವ ಅವರ ಬರವಣಿಗೆಯನ್ನು ಓದಿಯೇ ಆಸ್ವಾದಿಸಬೇಕು.

**ಡಾ. ಎಂ. ಎಸ್. ಲಠ್ಠೆ:** ಕನ್ನಡ ನಾಡಿನ ವಿದ್ವಾಂಸರ ಸಾಲಿನಲ್ಲಿ ಕೇಳಿಬರುವ ಪ್ರಮುಖ ಹೆಸರುಗಳಲ್ಲಿ ಡಾ. ಎಂ.ಎಸ್. ಲಠ್ಠೆಯವರದು. ಖ್ಯಾತ ಜಾನಪದ ವಿದ್ವಾಂಸರು ವಚನ ಸಾಹಿತ್ಯದ ಶ್ರೇಷ್ಠ ಸಂಶೋಧಕರು ಕನ್ನಡ ಸಾರಸತ್ವ ಲೋಕದಲ್ಲಿ ವಚನ ಮತ್ತು ಜಾನಪದ ಸಾಹಿತ್ಯಗಳ ಸಮನ್ವಯಕಾರ ಎಂಬ ಹೆಗ್ಗಳಿಕೆಗೆ ಪಾತ್ರರು. ಅಧ್ಯಯನ, ಅಧ್ಯಾಪನ, ಸಂಶೋಧನೆ, ಸಾಹಿತ್ಯರಚನೆ, ಸಮಾಜಸೇವೆ ಹೀಗೆ ಅವರದು ಬಹುಮುಖ ಕಾರ್ಯಕ್ಷೇತ್ರ, ಉತ್ತರ ಕರ್ನಾಟಕದ ಹಳ್ಳಿಹಳ್ಳಿಗಳನ್ನು ಸುತ್ತಿ ಒಗಟು, ಗಾದೆ, ಒಡಪು, ಜನಪದ ಗೀತೆಗಳು, ಕಥೆಗಳನ್ನು ಸಂಗ್ರಹಿಸಿ ಸ್ಮರಣೀಯ ಕಾರ್ಯ ಮಾಡಿದ್ದಾರೆ.

ಲಠ್ಠೆಯವರು ಬೆಳಗಾವಿ ಜಿಲ್ಲೆಯ ಮುತನಾಳ ಗ್ರಾಮದ ರೈತ ಕುಟುಂಬದ ಶಿವಪ್ಪ ಮತ್ತು ಬಸಮ್ಮ ಎಂಬ ವೀರಶೈವ ದಂಪತಿಗಳಿಗೆ ೧೯೩೦ ಎಪ್ರಿಲ್ ೧೨ ರಂದು ಹಿರಿಯ ಮಗನಾಗಿ ಮಲ್ಲಿಕಾರ್ಜುನ ಲಠ್ಠೆ ಜನಿಸಿದರು. ಪ್ರಾಥಮಿಕ ಶಿಕ್ಷಣ ಸ್ವಗ್ರಾಮದಲ್ಲಿ ಮುತನಾಳದಲ್ಲಿ ಆಯಿತು. ನಂತರ ಬೆಳಗಾವಿಯ ಪ್ರತಿಷ್ಠಿತ ಕೆ.ಎಲ್.ಇ.ಸಂಸ್ಥೆಯ ಲಿಂಗರಾಜ ಕಾಲೇಜಿನಲ್ಲಿ ಬಿ.ಎ.ಆನರ್ಸ್ ಪದವಿ ಮುಗಿಸಿ ಬೆಳಗಾವಿಯ ಜಿ. ಎ. ಹಾಯಸ್ಕೂಲಿನಲ್ಲಿ ಶಿಕ್ಷಕರಾಗಿ ವೃತ್ತಿಯನ್ನು ಆರಂಭಿಸಿದರು, ಜೊತೆಗೆ ಓದನ್ನು ಮುಂದುವರಿಸಿ ಪುಣೆ ವಿಶ್ವವಿದ್ಯಾಲಯದಿಂದ ಕನ್ನಡದಲ್ಲಿ ಎಂ.ಎ.ಪದವಿಯನ್ನು ಪಡೆದುಕೊಂಡರು. ಕೆ.ಎಲ್.ಇ.ಸಂಸ್ಥೆ ಇವರ ಶೈಕ್ಷಣಿಕ ಅರ್ಹತೆಯನ್ನು ಗಮನಿಸಿ ಗದುಗಿನ ತೋಂಟದಾರ್ಯ ಕಾಲೇಜಿಗೆ ಕನ್ನಡ ಅಧ್ಯಾಪಕ ಹುದ್ದೆಗೆ ಬಡ್ತಿ ನೀಡಿತು. ಇಷ್ಟಕ್ಕೆ ಲಠ್ಠೆಯವರ ಜ್ಞಾನದಾಹ ನಿಲ್ಲಲಿಲ್ಲ ಅವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಹೋಗಿ ಡಾ. ಆರ್. ಸಿ. ಹಿರೇಮಠ ಅವರನ್ನು ಕಂಡು ತಾವು ಬರೆದ ನಾಟಕಗಳನ್ನು ಇತರೆ ಲೇಖನಗಳನ್ನು ತೋರಿಸಿದರು ಅವರ ವಿದ್ವತ್ತನ್ನು ಮನಗಂಡ ಡಾ. ಆರ್.ಸಿ.ಹಿರೇಮಠರು ಲಠ್ಠೆಯವರಿಗೆ ಪಿ.ಎಚ್.ಡಿ. ಮಾಡಲು ತಿಳಿಸಿ ಸ್ವತಃ ತಾವೇ ಲಠ್ಠೆಯವರಿಗೆ ಮಾರ್ಗದರ್ಶಕರಾದರು. "ಮಹಾದೇವಿಯಕ್ಕ ಕಾರಿಕಾಲಮ್ಮೆ ಒಂದು ತೌಲನಿಕ ಅಧ್ಯಯನ" ಎಂಬ ವಿಷಯದ ಕುರಿತು ಸಂಶೋಧನ ಮಹಾಪ್ರಬಂಧವನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿ ಪಿ.ಎಚ್.ಡಿ. ಪದವಿಯನ್ನು ಪಡೆದುಕೊಂಡರು. ನಂತರ ಕರ್ನಾಟಕ ಕಾಲೇಜಿಗೆ ಕನ್ನಡ ಅಧ್ಯಾಪಕರಾಗಿ ಧಾರವಾಡಕ್ಕೆ ಬಂದರು.

ನಂತರದಲ್ಲಿ ಗುಲ್ಬರ್ಗಾ ಸ್ನಾತಕೋತ್ತರ ಕೇಂದ್ರದ ಹುದ್ದೆ ಅವರನ್ನು ಆರಿಸಿಕೊಂಡು ಬಂದಿತು ಮುಂದೆ ಗುಲ್ಬರ್ಗಾ ಲಠ್ಠೆಯವರ ಕರ್ಮಭೂಮಿಯಾಯಿತು. ಕಲಬುರ್ಗಿಗೆ ಬಂದ ನಂತರ ತಾವು ಬೇರೆಡೆಯಿಂದ ಬಂದವರು ಎಂಬ ಭಾವವನ್ನು ಇಟ್ಟುಕೊಳ್ಳದೆ ಕಲಬುರ್ಗಿಯ ಜನತೆಯ ಜೊತೆಗೆ ಬೆರೆಯಲು ಪ್ರಾರಂಭಿಸಿದರು. ಅವರು ಆಸಕ್ತಿಹೊಂದಿದ ಶರಣ ಸಾಹಿತ್ಯ ಮತ್ತು ಜನಪದ ಸಾಹಿತ್ಯ ಕ್ಷೇತ್ರಗಳು ಸಂಪೂರ್ಣವಾಗಿ ಕಲಬುರ್ಗಿಯವರಾಗಿ ಬೆಳೆಯಲು ಸಹಕಾರಿಯಾದವು. ಪರಕೀಯರು ಎಂಬ ಭಾವ ಕಲಬುರ್ಗಿಯ ಜನರ ಮನದಲ್ಲಿ ಸುಳಿಯದಂತೆ ಡಾ. ಲಠ್ಠೆಯವರು ಬದುಕಿದವರು.

೧೯೭೦ರಲ್ಲಿ ಕರ್ನಾಟಕದ ತುಂಬ ಜನಪದ ಸಾಹಿತ್ಯದ ಅಭ್ಯಾಸ ಪ್ರಾರಂಭವಾಗಿತ್ತು. ಡಾ. ಹೆಂಡಿಯವರ ಸಲಹೆಯ ಮೇರೆಗೆ ಡಾ. ಲಠ್ಠೆಯವರು ಜಾನಪದ ಕ್ಷೇತ್ರದಲ್ಲಿ ದುಡಿಯಲು ಸಂಕಲ್ಪ ಮಾಡಿದರು. ೧೯೭೩ರಲ್ಲಿ ಡಾ. ಹೆಂಡಿಯವರ ಜೊತೆಗೂಡಿ ಗಾದೆಗಳ ಸಂಗ್ರಹಕ್ಕೆ ತೊಡಗಿದರು. ಜೊತೆಗೆ ವೈಯಕ್ತಿಕ ಒಗಟು ಮತ್ತು ಒಡಪುಗಳ ಸಂಗ್ರಹ ಕೂಡ ಮಾಡಿದರು. ೧೯೭೪ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯು ಅವರ ಒಡಪುಗಳ ಸಂಗ್ರಹಕ್ಕೆ ಲಭಿಸಿತು. ಇದು ಲಠ್ಠೆಯವರಲ್ಲಿ ಜನಪದ ಸಾಹಿತ್ಯದಲ್ಲಿ ಉತ್ಸಾಹದಿಂದ ಕೆಲಸ ಮಾಡಲು ಆಸಕ್ತಿಯನ್ನು ಹುಟ್ಟಿಸಿತು. ಯಾವುದೇ ರೀತಿಯ ಹಿಂಜರಿಕೆಯಿಲ್ಲದೆ ಜಾನಪದ ಸಾಹಿತ್ಯ ಕೃಷಿಯಲ್ಲಿ ದಾಪುಕಾಲು ಹಾಕುತ್ತ ನಡೆದರು. ಕನ್ನಡದ ಪ್ರಸಿದ್ಧ ಮತ್ತು ಪ್ರಭಾವಿ ಸಾಹಿತಿಗಳು ಲಠ್ಠೆಯವರನ್ನು ಗುರುತಿಸತೊಡಗಿದರು. ಡಾ. ಲಠ್ಠೆಯವರು ೭೦ ರ ದಶಕದಲ್ಲಿ ವೈಯಕ್ತಿಕವಾಗಿ ಬಹುದೊಡ್ಡ ಪ್ರಮಾಣದಲ್ಲಿ ಜನಪದ ಸಾಹಿತ್ಯ ಸಂಗ್ರಹ, ಸಂಶೋಧನೆ ಮತ್ತು ಪ್ರಕಟಣೆ ಮಾಡಿದವರು ಡಾ. ಲಠ್ಠೆ ಒಬ್ಬರೆ ಎಂಬುದು ಗಮನಾರ್ಹ ಸಂಗತಿ. ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಹೈದ್ರಾಬಾದ ಕರ್ನಾಟಕದ ಜನಪದ ಸಾಹಿತ್ಯವನ್ನು ಸಂಗ್ರಹಿಸುವ ಕೆಲಸವನ್ನು ವೈಯಕ್ತಿಕ ಮಟ್ಟದಲ್ಲಿ ಪ್ರಾರಂಭಿಸಿದವರು ಡಾ.


ISSN : 2320-0391

Scanned with CamScanner

ಲಠ್ಠೆಯವರೆಂದರೆ ಅತಿಶಯೋಕ್ತಿಯೆನಲ್ಲ ಉತ್ತರ ಕರ್ನಾಟಕದ ಬಹುತೇಕ ಹಳ್ಳಿ ಹಳ್ಳಿಗಳನ್ನು ತಿರುಗಾಡಿ ಹಾಡುವ ಜನಪದ ಕಲಾವಿದರನ್ನು ಹಾಡು ಸೃಜಿಸುವ ಕಲಾವಿದರನ್ನು, ಜನಪದ ಕವಿಗಳನ್ನು ಗುರುತಿಸಿದ್ದಾರೆ. ಈ ಕವಿ ಮತ್ತು ಕಲಾವಿದರಿಂದ ಮೌಖಿಕ ಸಾಹಿತ್ಯವನ್ನು ಮತ್ತು ಇತರ ಸಾಂಸ್ಕೃತಿಕ ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ವಿಶೇಷವಾಗಿ ಬಹುಮುಖ ಪ್ರತಿಭಾವಂತರಾದ ಕವಿಗಳನ್ನು ಗುರುತಿಸಿ ಅವರ ಬದುಕನ್ನು ದಾಖಲಿಸುವ ಕೆಲಸವನ್ನು ಮಾಡಿದ್ದಾರೆ.

ಮೇಲಿನ ಎಲ್ಲ ಸಂಗತಿಗಳ ಹಿನ್ನೆಲೆಯಲ್ಲಿ ಡಾ. ಎಂ. ಎಸ್. ಲಠ್ಠೆ ಅವರನ್ನು ಕೇವಲ ಸಂಗ್ರಹಕಾರರೆಂದು ಗುರುತಿಸುವುದು ದೊಡ್ಡ ಪ್ರಮಾದವಾದಿತು. ಮೈಸೂರಿನಕಡೆ ಜೀ.ಶಂ.ಪರಮಶಿವಯ್ಯ, ಧಾರವಾಡದ ಕಡೆ ಡಾ. ಬಿ. ಎಸ್. ಗದ್ದಗಿಮಠ ಮಾಡಿದ ಕೆಲಸಗಳನ್ನು ಗಮನಿಸಿದಂತೆ ಕಲಬುರ್ಗಿಯ ಕಡೆ ಡಾ.ಲಠ್ಠೆಯವರ ಕೆಲಸವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಕರ್ನಾಟಕದಲ್ಲಿ ಮೌಖಿಕ ಪರಂಪರೆಯ ಜ್ಞಾನದ ಶೋಧಕರಲ್ಲಿ ಈ ಮೂವರು ಸಾಧಕರ ಹೆಸರುಗಳು ಪ್ರಮುಖವಾಗಿ ಕಾಣಸಿಗುತ್ತವೆ. ಕರ್ನಾಟಕ ಸಂಸ್ಕೃತಿಯ ಅಧ್ಯಯನದಲ್ಲಿ ಈ ಮೂವರು ಮೌಖಿಕ ಪರಂಪರೆಯ ಒಂದೊಂದು ಕ್ಷೇತ್ರವನ್ನು ಅನಾವರಣ ಮಾಡಿರುವರು. ಸಂಗ್ರಹ, ಸಂಪಾದನೆ, ಪ್ರಕಟಣೆ, ಪ್ರಚಾರ ಮತ್ತು ಸಂಶೋಧನಾಧ್ಯಯನ ಮಾಡಿದವರು.

ಡಾ. ಗದ್ದಗಿಮಠ ಅವರಿಗೆ ಹೆಚ್ಚು ಆಕರ್ಷಿಸಿದ್ದು ಸಂಪ್ರದಾಯದ ಹಾಡುಗಳು ಮತ್ತು ಅವುಗಳ ಸಾಂದರ್ಭಿಕ, ಸಾಂಸ್ಕೃತಿಕ ಆಚರಣೆಗಳು ಡಾ. ಜೀ. ಶಂ. ಪರಮಶಿವಯ್ಯನವರಿಗೆ ಹೆಚ್ಚು ಸಿದ್ಧಿಸಿದ್ದು ದೀರ್ಘವಾದ ಕಥೆಗಳುಳ್ಳ ವೃತ್ತಿಗಾಯಕರ ಕಾವ್ಯಗಳು ಮತ್ತು ಅವುಗಳ ಸಾಂದರ್ಭಿಕ ಸಾಂಸ್ಕೃತಿಕ ಮಹತ್ವದ ಸಂಗತಿಗಳು ಆದರೆ ಡಾ. ಲಠ್ಠೆಯವರಿಗೆ ಒಲಿದದ್ದು ಜಾನಪದ ಹಾಡು ಮತ್ತು ಬಯಲಾಟಗಳು ಹಾಗೂ ಅವುಗಳನ್ನು ಸೃಷ್ಟಿಸಿದ ಕವಿಗಳು.

ಡಾ. ಲಠ್ಠೆಯವರು ಪ್ರಶಸ್ತಿ ಗೌರವಗಳನ್ನೆಂದೂ ಬಯಸಿದವರಲ್ಲ ಆದರೂ ಅವರ ಉತ್ಕೃಷ್ಟ ಕೃತಿಗಳಿಗೆ ಹತ್ತಾರು ಪ್ರಶಸ್ತಿಗಳು ಬಂದಿವೆ. ಪ್ರಭುದೇವರ ಯಕ್ಷಗಾನ ಗ್ರಂಥಕ್ಕೆ ಜಾನಪದ ಅಕಾಡೆಮಿ ಪುರಸ್ಕಾರ ಸಂದಿದೆ. ವೀರಶೈವ ಧರ್ಮಾಚರಣೆಗಳು ಗ್ರಂಥಕ್ಕೆ ಇಳಕಲ್ ಮಠದ ಪ್ರಶಸ್ತಿ ದೊರೆತಿದೆ. ಬೆಳಗಾವಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಹಾಗೂ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷ ಸ್ಥಾನ ನೀಡಿ ಕನ್ನಡ ಸಾರಸತ್ವ ಪ್ರಪಂಚ ಗೌರವಿಸಿ ಸಂತಸಪಟ್ಟಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿಜ್ಞ ಎಂಬ ಸನ್ಮಾನ ನೀಡಿ ಗೌರವಿಸಿದೆ. ಒಂಬತ್ತನೆಯ ಅಖಿಲಭಾರತ ಶರಣ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನ ಕೂಡ ಇವರಿಗೆ ಸಂದಿರುವದು ಹೆಮ್ಮೆಯ ಸಂಗತಿ.

ಜಾನಪದ ತಜ್ಞರೆಂದೆ ಖ್ಯಾತಿಗಳಿಸಿ ಡಾ. ಲಠ್ಠೆಯವರು ದಿನಾಂಕ : ೧೯-೧೧-೨೦೦೭ ರಂದು ಲಿಂಗೈಕ್ಯರಾದರೆಂದು ತಿಳಿಸಲು ಮನಸ್ಸು ಭಾರವಾಗುತ್ತದೆ.

ಡಾ. ಶಶಿಕಲಾ ಮೋಳ್ದಿ:- ಹಿತಮಿತಭಾಷಿ, ಸರಳ ಸಜ್ಜನರೂ ಆಗಿರುವ ಡಾ. ಶಶಿಕಲಾ ಮೋಳ್ದಿಯವರು ೧೦-೦೭-೧೯೩೮ ರಂದು ಗುಲ್ಬರ್ಗಾ ಜಿಲ್ಲೆಯ ಮಹಗಾಂವ ಗ್ರಾಮದಲ್ಲಿ ಜನಿಸಿದರು. ಆ ಗ್ರಾಮದ ಪ್ರತಿಷ್ಟಿತ ಗೌಡರ ಮನೆತನದ ಶ್ರೀ ರುದ್ರಶೆಟ್ಟಿ ಪಾಟೀಲ ಹಾಗೂ ಕಾಶಿಬಾಯಿಗೌಡತಿ ಮುದ್ದಿನ ಮಗಳಾಗಿ ಬೆಳೆದರು ಇವರು ಪ್ರಾಥಮಿಕ ಪ್ರೌಢಶಿಕ್ಷಣವನ್ನು ಸ್ವಗ್ರಾಮದಲ್ಲಿ ಪೂರೈಸಿ ಇವರು ಕನ್ನಡ ವಿಷಯದಲ್ಲಿ ಎಂ.ಎ. ಸ್ನಾತಕೋತ್ತರ ಪದವಿಯನ್ನು ಹೈದ್ರಾಬಾದದ ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ಪಡೆದುಕೊಂಡರು. ನಂತರ ಡಿ.ವಿ.ಜಿ. ಸಾಹಿತ್ಯ ಹಾಗೂ "ಯುಗಧರ್ಮ" ಎಂಬ ವಿಷಯದ ಕುರಿತು ಪಿ.ಎಚ್.ಡಿ. ಸಂಶೋಧನಾ ಮಹಾಪ್ರಬಂಧವನ್ನು ಸಾದರಪಡಿಸಿ ಪಿ.ಎಚ್.ಡಿ. ಪಡೆದುಕೊಂಡಿದ್ದಾರೆ. ಇವರು ಕಲಬುರ್ಗಿಯ ಶರಣಬಸವೇಶ್ವರ ಮಹಾವಿದ್ಯಾಲಯದಲ್ಲಿ ತಮ್ಮ ಸೇವಾವೃತ್ತಿಯನ್ನು ಆರಂಭಿಸಿ ಅಲ್ಲಿ ಹತ್ತುವರ್ಷ ಸೇವೆ ಸಲ್ಲಿಸಿ ಆನಂತರ ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ, ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ ಮತ್ತು ಕಲಾನಿಕಾಯದ ಡೀನ್‌ರಾಗಿ ಕನ್ನಡ ಪ್ರಾಧ್ಯಾಪಕ ಹುದ್ದೆಯಿಂದ ನಿವೃತ್ತರಾದರು.

ಡಾ. ಶಶಿಕಲಾ ಮೋಳ್ದಿಯವರು ಜಾನಪದ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡದ್ದು ಅವರ ಕ್ರಿಯಾಶೀಲ ವ್ಯಕ್ತಿತ್ವಕ್ಕೆ ನಿದರ್ಶನವಾಗಿದೆ. ಕಲ್ಯಾಣ ಕರ್ನಾಟಕವು ಅಂದರೆ ಹೈದ್ರಾಬಾದ ಕರ್ನಾಟಕವು ಜಾನಪದ ಸಾಹಿತ್ಯದ ಕಣಜವಾಗಿದೆ. ಈ ಕ್ಷೇತ್ರದಲ್ಲಿ ಡಾ. ಮೋಳ್ದಿಯವರು ಕ್ಷೇತ್ರಕಾರ್ಯ ನಡೆಸಿ ಹೊರತಂದ 'ಹರದೆಯರ ಹಾಡುಗಳು' ಮತ್ತು 'ಚಾಜದ ಹಾಡುಗಳು' ಎಂಬ ಕೃತಿಗಳು ಮಹತ್ವದ್ದಾಗಿವೆ.

ಇವರ ಹರದೆಯರ ಹಾಡುಗಳು ಕೃತಿಯಲ್ಲಿ ಒಟ್ಟು ಮೂರು ಭಾಗಗಳಿದ್ದು ೨೮ ವಿವಿಧ ರೀತಿಯ ಜಾನಪದ ಹಾಡುಗಳನ್ನು ಕಾಣಬಹುದು. ದ್ವಿಪದಿ, ತ್ರಿಪದಿ, ಚೌಪದಿಗಳಲ್ಲಿ ವಿವಿಧ ರೀತಿಯಲ್ಲಿ ಹಾಡಿರುವ ಹರದೆಯರ ಹಾಡುಗಳನ್ನು ಕಾಣಬಹುದು. ಕುಟ್ಟುವ, ಬೀಸುವ, ಚಾಜದ ಹಾಡುಗಳನ್ನು


ISSN : 2320-0391


Scanned with CamScanner

ಕೋಲಾಟದ ಪದಗಳನ್ನು ಹಾಡಿರುವ ಹರದೆಯರ ಹಾಡುಗಳನ್ನು ಕಾಣಬಹುದು. ಹೆಣ್ಣುಮಕ್ಕಳ ಅಂತರಂಗದ ಧ್ವನಿ ಇಲ್ಲಿ ಅಭಿವ್ಯಕ್ತಗೊಂಡಿದೆ. ಇನ್ನೂ ಚಾಜದ ಹಾಡುಗಳಲ್ಲಿ ವಿಶಿಷ್ಟ ರೀತಿಯ ಹಾಡುಗಳ ರಸಧಾರೆಯನ್ನು ಕಾಣುತ್ತೇವೆ. ಮದುವೆ, ಮುಂಜಿವೆ, ಕುಂಕುಮ ಹಚ್ಚುವ, ಒಳಕಲ್ಲಪೂಜೆ, ಕೊಡಪೂಜೆ, ಎಣ್ಣೆ ಹಚ್ಚುವ, ಗುಗ್ಗುಳ ತರುವ, ಭೂಮಾತರುವ, ಕೂಸು ಒಪ್ಪಿಸುವ, ಸೋಭಾನೆ, ಶೀಮಂತಕಾರ್ಯ, ಜೋಗುಳ ಹೀಗೆ ವಿವಿಧ ರೀತಿಯ ಸಂಭ್ರಮಗಳಿಗೆ ಸಂಬಂಧಿಸಿದ ಹಾಡುಗಳನ್ನು ಚಾಜದ ಹಾಡುಗಳಲ್ಲಿ ಕಾಣುತ್ತೇವೆ. ಹಾಗೆ ಮೋಳ್ದಿಯವರು ಹಬ್ಬಹುಣ್ಣಿಮೆಗಳು, ಡಾ. ಬಿ. ಬಿ. ಹೆಂಡಿಯವರ ಅಭಿನಂದನಾಗ್ರಂಥ (ವಂದನೆ), ಜನಪದರ ನಂಬಿಕೆಗಳು, ಆಚರಣೆ ಹಿಂದಿರುವ ಸಾಂಸ್ಕೃತಿಕ ಮೌಲ್ಯಗಳನ್ನು ಅರ್ಥಪೂರ್ಣವಾಗಿ ವಿವೇಚಿಸಿದ್ದಾರೆ. ಒಟ್ಟಾರೆ ಈ ಭಾಗದ ಜಾನಪದ ವಿದ್ವಾಂಸರಲ್ಲಿ ಸಾಧಕರಲ್ಲಿ ಡಾ. ಶಶಿಕಲಾ ಮೋಳ್ದಿಯವರು ಒಬ್ಬರಾಗಿದ್ದಾರೆ.

**ಡಾ. ವೀರಣ್ಣ ದಂಡೆ :** ಕನ್ನಡ ಜಾನಪದ ಅಧ್ಯಯನದ ಇತಿಹಾಸದಲ್ಲಿ ಡಾ. ವೀರಣ್ಣ ದಂಡೆಯವರದು ದೊಡ್ಡ ಹೆಸರು ಕಳೆದ ಮೂರು ದಶಕಗಳಿಂದ ಜಾನಪದ, ಅಧ್ಯಯನ, ಅಧ್ಯಾಪನ, ಸಂಗ್ರಹ ಸಂಪಾದನೆ, ಸಂಶೋಧನೆ ಕೈಗೊಂಡು ಸುಮಾರು ೩೦ ಕ್ಕಿಂತ ಹೆಚ್ಚು ಮೌಲಿಕ ಕೃತಿಗಳನ್ನು ನೂರಾರು ಸಂಶೋಧನಾತ್ಮಕ ಲೇಖನಗಳನ್ನು ಪ್ರಕಟಿಸಿದ್ದಾರೆ. ಹೀಗಾಗಿ ಜಾನಪದ ತಜ್ಞ ಸೇರಿದಂತೆ ಹಲವಾರು ಪ್ರತಿಷ್ಠಿತ ಪ್ರಶಸ್ತಿ ಪುರಸ್ಕಾರಗಳು ಇವರನ್ನು ಹುಡುಕಿಕೊಂಡು ಬಂದಿವೆ. ಡಾ. ವೀರಣ್ಣ ದಂಡೆ ಅವರು ಕಲಬುರ್ಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಸಲಗರದವರು. ಶರಣಪ್ಪ ಹಾಗೂ ಬಂಡಮ್ಮ ದಂಪತಿಗಳ ಮಗನಾಗಿ ೧೯೫೧ ರಲ್ಲಿ ನವ್ಹೆಂಬರ ೨ ನೇ ತಾರೀಖಿನಂದು ಜನ್ಮ ತಳೆದರು. ಪ್ರಾಥಮಿಕ ಪ್ರೌಢ ಶಿಕ್ಷಣವನ್ನು ಸ್ವಗ್ರಾಮದಲ್ಲಿ ಪೂರೈಸಿ ಪದವಿ ಹಾಗೂ ಸ್ನಾತಕೋತ್ತರ ಪದವಿಗಳನ್ನು ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಪಡೆದುಕೊಂಡಿದ್ದಾರೆ. ಮುಂದೆ ಡಾ. ಬಿ. ಬಿ. ಹೆಂಡಿ, ಡಾ. ಎಂ.ಜಿ.ಬಿರಾದಾರ, ಡಾ. ಎಂ. ಎಸ್. ಲಠ್ಠೆಯವರ ಪ್ರೇರಣೆ ಹಾಗೂ ಪ್ರೋತ್ಸಾಹದಿಂದಾಗಿ "ಉತ್ತರ ಕರ್ನಾಟಕದ ಏಳು ಜಿಲ್ಲೆಗಳ ಜನಪದ ಕಥೆ, ಹಾಡುಗಳ ಸಂಗ್ರಹ ಸಂಪಾದನಾ ಮತ್ತು ಪ್ರಕಟಣಾ ಯೋಜನೆಯಲ್ಲಿ ಸಹಾಯಕ ಸಂಶೋಧಕರಾಗಿ ಕೆಲಸ ಮಾಡಿದರು.(೧೯೭೫-೧೯೭೭) ತದನಂತರ ೧೯೮೧-೧೯೮೨ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜಾನಪದ ವೈದ್ಯಕೋಶ ಸಂಶೋಧನ ಯೋಜನೆಯಲ್ಲಿ ಕ್ಷೇತ್ರಕಾರ್ಯ ಸಹಾಯಕರಾಗಿ ದುಡಿದರು.ಡಾ. ಬಿ.ಬಿ.ಹೆಂಡಿಯವರ ಮಾರ್ಗದರ್ಶನದಲ್ಲಿ "ಕಲಬುರ್ಗಿಯ ಜಿಲ್ಲೆಯ ಜನಪದ ಕಥೆಗಳ ಆಶಯ ಮತ್ತು ಮಾದರಿಗಳು" ಎಂಬ ವಿಷಯದ ಕುರಿತು ಪ್ರಬಂಧ ಮಂಡಿಸಿ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ. ಪದವಿ ಪಡೆದುಕೊಂಡಿರುತ್ತಾರೆ.

ಜಾನಪದ ಗ್ರಂಥಸಂಪಾದನೆಗೆ ವೈಜ್ಞಾನಿಕ ಕ್ರಮವನ್ನು ಕಟ್ಟಿಕೊಡುವ ದಿಸೆಯಲ್ಲಿ ಡಾ. ದಂಡೆಯವರ ಜನಪದ ಹಾಲುಮತ ಮಹಾಕಾವ್ಯ ವಿಶೇಷವಾಗಿ ಗಮನ ಸೆಳೆಯುವದು ೭೦೦ ಪುಟಗಳ ಸುದೀರ್ಘವಾದ ಪಠ್ಯವನ್ನು ಸಂಗ್ರಹಿಸಿದ್ದಾರೆ. ಹಾಲುಮತ ಸಂಸ್ಕೃತಿಗೆ ಸಂಬಂದಿಸಿದ ಈ ಮಹಾಕಾವ್ಯವನ್ನು ಅಪಾರ ಪರಿಶ್ರಮದಿಂದ ಸತತ ಐದು ವರ್ಷಗಳ ಕಾಲ ಸಂಗ್ರಹಿಸಿ ಶಾಸ್ತ್ರೀಯವಾಗಿ ಸಂಪಾದಿಸಿಕೊಟ್ಟಿದ್ದಾರೆ. ಜೊತೆಗೆ ಕಲಬುರ್ಗಿ ಜಿಲ್ಲೆಯಲ್ಲಿ ಪ್ರಚಲಿತವಿರುವ ಗಾದೆ, ಒಗಟುಗಳನ್ನು ಸಂಗ್ರಹಿಸಿ ಗಾದೆಗಳ ಮಾದರಿ ಸೂಚಿ ಹಾಗೂ ಒಗಟುಗಳ ಆಶಯ ಸೂಚನೆಗಳನ್ನು ಪ್ರಕಟಿಸಿದ್ದಾರೆ. ಇವುಗಳಲ್ಲದೆ ಜಾನಪದ ೧೯೯೨ ಎಂಬ ಕೃತಿಯನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗಾಗಿ ಸಂಪಾದಿಸಿಕೊಟ್ಟಿದ್ದಾರೆ. ಇವುಗಳಲ್ಲದೆ ಅಷ್ಟಾವರಣ ತಿಲಕ ಚಿಂತನಶೀಲ ಪ್ರಾಧ್ಯಾಪಕ ಡಾ. ಬಿ.ಬಿ.ಹೆಂಡಿ, ತತ್ತ್ವಪದಗಳ ಪ್ರಾತಿನಿಧಿಕ ಸಂಕಲನ (೨೦೦೦ನೇ ಇಸ್ವಿ) ಕೃತಿಗಳನ್ನು ಇತರರೊಂದಿಗೆ ಸಂಪಾದಿಸಿಕೊಟ್ಟಿದ್ದಾರೆ. ಹೀಗೆ ಸಂಶೋಧನೆ, ವಿಶ್ಲೇಷಣೆ, ವಿಮರ್ಶೆ ಜೊತೆಗೆ ಅಂಕಣ ಸಾಹಿತ್ಯದಲ್ಲಿ ಅವರ ಸಾಧನೆ ಗಮನಾರ್ಹವಾಗಿದೆ. 'ಕವಿಮಾರ್ಗ' ಎಂಬ ಸಾಹಿತ್ಯಿಕ ತ್ರೈಮಾಸಿಕ ಪತ್ರಿಕೆಯನ್ನು ೧೯೮೭ ರ ವರೆಗೆ ಒಂಬತ್ತು ವರ್ಷ ಸಂಪಾದಿಸಿ ಪ್ರಕಟಿಸಿದ್ದಾರೆ. 'ಪ್ರಜಾವಾಣಿ'ದಿನಪತ್ರಿಕೆಗೆ 'ಕಲಬುರಗಿ ಕಲರವ' ಎಂಬ ಅಂಕಣ ಬರಹದ ಮೂಲಕ ಹೈದ್ರಾಬಾದ ಕರ್ನಾಟಕ ಭಾಗದ ಕವಿ, ಕಲಾವಿದರು, ಶಿಲ್ಪಕಲೆ, ಚಿತ್ರಕಲೆ, ಸಂಗೀತ, ಸಾಹಿತ್ಯ, ಶಿಕ್ಷಣ, ಇತಿಹಾಸ, ಜಾನಪದ, ಚರಿತ್ರೆ ಹೀಗೆ ಈ ಭಾಗದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ನಾಡಿನ ತುಂಬೆಲ್ಲ ಪ್ರಚಾರ ಮತ್ತು ಪ್ರಸಾರ ಮಾಡಿದ ಹಾಗೂ ಪರಿಚಯಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ.

ಇವರ ಸಾಹಿತ್ಯ ಸಾಧನೆಗಾಗಿ ೧೯೯೬ ರಲ್ಲಿ ಚಿತ್ರದುರ್ಗದ ಬೃಹನ್ಮಠದ ಶ್ರೀಗಳು 'ಜಾನಪದ ಶ್ರೀ' ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಇವರ ಪ್ರಥಮ ಕೃತಿಯಾದ ಜನಪದ ಕಥೆಗಳ ಕಥೆವಸ್ತು ಮತ್ತು ತಂತ್ರಕ್ಕೆ ೧೯೮೧ ರಲ್ಲಿ ದೇವರಾಜ ಬಹದ್ದೂರ ಪ್ರಶಸ್ತಿ ದೊರಕಿದೆ. ಇವರ ಆಯ್ದಗಾದೆಗಳು ಹಾಗೂ ಒಗಟುಗಳು ಕೃತಿಗೆ ೧೯೮೫ ರಲ್ಲಿ ಕಲಬುರ್ಗಿ ವಿಶ್ವವಿದ್ಯಾಲಯ ಬಹುಮಾನ ಬಂದಿದೆ. ಜನಪದ ಹಾಲುಮತ ಮಹಾಕಾವ್ಯ ಕೃತಿಗೆ ಕು.ಶಿ. ಹರಿದಾಸಬಟ್ಟ



Scanned with CamScanner

ಜಾನಪದ ಪ್ರಶಸ್ತಿ ೨೦೦೦ರಲ್ಲಿ ಸಂದಿದೆ. ೨೦೦೫ ರಲ್ಲಿ ಜಾನಪದತಜ್ಞ ಡಾ. ಬಿ. ಎಸ್. ಗದ್ದಗಿಮಠ ಪುರಸ್ಕಾರ ನೀಡಿ ಗೌರವಿಸಲಾಗಿದೆ. ಇವರ ಕನ್ನಡ ಜಾನಪದ 'ಪ್ರಜ್ಞೆ' ಕೃತಿಗೆ ಕಾವ್ಯಾನಂದ ಪ್ರಶಸ್ತಿ ಲಭಿಸಿದೆ. ಹಾಗೂ ಕರ್ನಾಟಕ ಜಾನಪದ ಅಕಾಡೆಮಿ ಬಹುಮಾನ ಕೂಡ ಬಂದಿದೆ. ಹೀಗೆ ಬಹುಮುಖ ಪ್ರತಿಭೆಯ ಜಾನಪದ ವಿದ್ವಾಂಸ, ಸಾಹಿತಿ, ಸಂಶೋಧಕ, ಸಂಪಾದಕರಾಗಿ ಅತಿ ಹೆಚ್ಚು ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ ವಿಶಿಷ್ಟ ಸಂವೇದನೆಗಳ ಲೇಖಕರಾಗಿದ್ದಾರೆ.

**ಡಾ. ಬಸವರಾಜ ಪೋಲಿಸ ಪಾಟೀಲ :** ಡಾ. ಬಸವರಾಜ ಪೋಲಿಸ ಪಾಟೀಲ ಅವರು ಗುಲ್ಬರ್ಗಾ ಜಿಲ್ಲೆಯ ಅಫಜಲಪುರ ತಾಲೂಕಿನ ಡಿಕ್ಸಂಗಾ[ಬಿ] ಗ್ರಾಮದಲ್ಲಿ ೦೧-೦೮-೧೯೫೪ ರಲ್ಲಿ ಜನಿಸಿದರು. ತಂದೆ ಶಾಮರಾವ ಪಾಟೀಲ ತಾಯಿ ಸೋನುಬಾಯಿ ಪಾಟೀಲ ಇವರದು ಗೌಡರ ಪ್ರತಿಷ್ಠಿತ ಮನೆತನ ಊರಿನ ಎಲ್ಲ ಸಮಾಜದ ಜನರೊಂದಿಗೆ ಬೆರೆತು ಎಲ್ಲ ಬಡವ ದೀನದಲಿತರಿಗೆ ಸಹಾಯ ಸಹಕಾರ ನೀಡಿ ಬಡವರ ಕಣ್ಣೀರು ಒರೆಸಿದ ದಯಾಹೃದಯಿಗಳು. ಬಸವರಾಜ ಪಾಟೀಲರ ಪ್ರಾಥಮಿಕ ಶಿಕ್ಷಣ ಸ್ವಗ್ರಾಮದಲ್ಲಿ ಪ್ರೌಢ ಹಾಗೂ ಪದವಿ ಶಿಕ್ಷಣ ಕಲಬುರ್ಗಿಯ ಶರಣ ಬಸವೇಶ್ವರ ಪದವಿ ಮಹಾವಿದ್ಯಾಲಯದಲ್ಲಿ ಪೂರೈಸಿ ೧೯೭೬ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವಾದ ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಎಂ.ಎ. ಕನ್ನಡ ವಿಷಯವನ್ನು ಪಡೆದುಕೊಂಡು ಜಾನಪದದಲ್ಲಿ ವಿಶೇಷ ಆಸಕ್ತಿ ಹೊಂದಿದ್ದ ಇವರ ಪ್ರತಿಭೆಯಿಂದ ಜಾನಪದಕಲೆ, ಸಾಹಿತ್ಯಕ್ಷೇತ್ರ ವಿಸ್ತಾರಗೊಂಡಿತು.

೧೯೭೭ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಹಿರಿಯ ವಿದ್ವಾಂಸರಾದ ಡಾ.ಬಿ.ಬಿ.ಹೆಂಡಿಯವರ ಮಾರ್ಗದರ್ಶನದಲ್ಲಿ ಸಹಾಯಕ ಸಂಶೋಧಕರಾಗಿ ಯು.ಜಿ.ಸಿ. ಯೋಜನೆಯಡಿ ಜನಪದ ಸೇವೆಕೈಕೊಂಡು ಹೈದ್ರಾಬಾದ ಕರ್ನಾಟಕದ ಜಿಲ್ಲೆಗಳ ಪ್ರತಿ ಹಳ್ಳಿಗಳಿಗೂ ಕ್ಷೇತ್ರಕಾರ್ಯಮಾಡಿ ಅಜ್ಞಾತವಾಗಿದ್ದ ಜಾನಪದ ಕಲೆ, ಸಾಹಿತ್ಯಪ್ರಕಾರಗಳನ್ನು ಕವಿಗಳನ್ನು, ಕಲಾವಿದರನ್ನು, ಜನಪದ ಮೇಳಗಳನ್ನು ಗುರುತಿಸಿ ಬೆಳಕಿಗೆ ತಂದ ಹೆಗ್ಗಳಿಕೆ ಇವರದಾಗಿದೆ. ಇವರ ಪರಿಶ್ರಮದ ಫಲವಾಗಿ ಜಾನಪದ ಭಂಡಾರದಲ್ಲಿ ವಿವಿಧ ಪ್ರಕಾರಗಳ ೩ ಸಾವಿರ ಹಾಡುಗಳು ೨ ಸಾವಿರ ಜನಪದ ಕಥೆಗಳು ಸಂಗ್ರಹಗೊಂಡು ಗುಲ್ಬರ್ಗಾ ವಿಶ್ವವಿದ್ಯಾಲಯದ ಗ್ರಂಥಭಂಡಾರದಲ್ಲಿ ಶೇಖರಣೆಗೊಂಡಿವೆ. ನೂರಾರು ದೊಡ್ಡಾಟ, ಸಣ್ಣಾಟ, ಸಂಗ್ರಹಗಳು ಅನೇಕ ಜನಪದ ಕವಿಗಳ ಜೀವನ ವೃತ್ತಾಂತ ಅವರು ರಚಿಸಿದ ಹಸ್ತಪ್ರತಿಗಳ ಸಂಗ್ರಹವಿದೆ. ಇದೆಲ್ಲದರ ಪ್ರತಿಫಲವಾಗಿ ೧೯೭೮ ರಲ್ಲಿ ಡಾ.ಎಂ.ಎಸ್.ಲಠ್ಠೆಯವರ ಮಾರ್ಗದರ್ಶನದಲ್ಲಿ "ಹೈದರಾಬಾದ ಕರ್ನಾಟಕ ಜನಪದ ಸಾಹಿತ್ಯ ಒಂದು ಅಧ್ಯಯನ" ಎಂಬ ವಿಷಯದ ಕುರಿತು ಸಂಶೋಧನೆ ಮಾಡಿ ಮಹಾಪ್ರಬಂಧವನ್ನು ವಿಶ್ವವಿದ್ಯಾಲಯಕ್ಕೆ ಸಾದ'ರಪಡಿಸಿ ಪಿ.ಎಚ್.ಡಿ. ಪದವಿಯನ್ನು ಪಡೆದುಕೊಂಡಿದ್ದಾರೆ.

ಡಾ. ಬಸವರಾಜ ಪೋಲಿಸ ಪಾಟೀಲರು ತಮ್ಮ ಸಂಶೋಧನಾಧ್ಯಯನವನ್ನು ಪೂರ್ಣಗೊಳಿಸಿದ ನಂತರ ೧೯೮೪ ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅತಿಥಿ ಉಪನ್ಯಾಸಕರಾಗಿ ತಮ್ಮ ವೃತ್ತಿಯನ್ನು ಪ್ರಾರಂಭಿಸಿದರು ಜೊತೆಗೆ ಗುಲ್ಬರ್ಗಾ ಎಂ.ಎಸ್.ಐ. ಪದವಿ ಮಹಾವಿದ್ಯಾಲಯದಲ್ಲಿಯೂ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ತಮ್ಮ ಕ್ರಿಯಾಶೀಲತೆ ಮತ್ತು ಪರಿಣಾಮಕಾರಿ ಪಾಠಬೋಧನೆಯಿಂದ ವಿದ್ಯಾರ್ಥಿಗಳ ಮನಸೂರೆಗೊಂಡ ಪ್ರಭಾವಿ ಪ್ರಾಧ್ಯಾಪಕರೆನಿಸಿಕೊಂಡರು.

ಡಾ. ಪೋಲಿಸ ಪಾಟೀಲರು ಬದುಕಿನಂತೆಯೇ ಅವರ ಬರವಣಿಗೆಯೂ ಅತ್ಯಂತ ಸರಳ ಡಾ. ಬಸವರಾಜ ಪೋಲಿಸ ಪಾಟೀಲರ ಜಾನಪದ ಕಾರ್ಯವು ಸಂಶೋಧನಾಮುಖಿ, ಅಧ್ಯಯನ ಮುಖಿಯಾದುದು ಅವರ ಜಾನಪದ ಸಿರಿ, ಸಂವೇದನ, ಜಾನಪದ ಸೌರಭ, ಜಾನಪದ ವ್ಯಾಸಂಗ, ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ, ಜಾನಪದ ಚಿಂತನ, ಅಮರ ಜಾನಪದ, ಅಮೂಲ್ಯ ಜಾನಪದ, ಜನಪದ ಸಾಹಿತ್ಯ ಮತ್ತು ಶರಣರು. ಹೀಗೆ ಹಲವಾರು ಮೌಲ್ಲಿಕ ಜಾನಪದ ಸಾಹಿತ್ಯದ ಕುರಿತು ಕೃಷಿಮಾಡಿ ಜಾನಪದ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಹಿರಿಯ ವಿದ್ವಾಂಸರಾಗಿದ್ದಾರೆ. ಜೊತೆಗೆ ಗುಲ್ಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗ ನಿರ್ದೇಶಕರಾಗಿ ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯರಾಗಿ ಸಮರ್ಥವಾಗಿ ಕಾರ್ಯನೆರವೇರಿಸಿದ ಆಡಳಿತಾತ್ಮಕ ಅನುಭವ ಇವರಿಗೆ ಇದೆ. ಇಂತಹ ಬಹುಮುಖ ವ್ಯಕ್ತಿತ್ವದ ಡಾ. ಬಸವರಾಜ ಪಾಟೀಲರ ಹೆಸರು ಜಾನಪದಕ್ಷೇತ್ರದಲ್ಲಿ ಗಮನಾರ್ಹವಾದುದು.

**ಪ್ರೊ. ಸೂಗಯ್ಯ ಹಿರೇಮಠ :** ಪ್ರೊ.ಸೂಗಯ್ಯ ಹಿರೇಮಠ ಸುಮಾರು ಮೂವತ್ತೈದು ವರ್ಷಗಳಿಂದ ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮದೇ ಆದ ವಿಶಿಷ್ಟ ಬರಹದ ಮೂಲಕ ಕನ್ನಡಿಗರ ಮನಸೂರೆಗೊಂಡವರು. ಕವಿಯಾಗಿ, ಕಥೆಗಾರರಾಗಿ, ಸಂಶೋಧಕರಾಗಿ, ವಿಚಾರವಾದಿಗಳಾಗಿ ಆರಂಭದಲ್ಲಿ ಸೃಜನಶೀಲ ಬರಹಗಾರರಾಗಿ ಕೃಷಿಗೈದ ಹಿರೇಮಠರು ಜಾನಪದ ಸಾಹಿತ್ಯಕ್ಷೇತ್ರದಲ್ಲಿಯೂ ಸಂಗ್ರಹ,



Scanned with CamScanner

ಸಂಪಾದನೆ ಕಾರ್ಯಮಾಡುತ್ತ ಬಂದಿದ್ದಾರೆ. ಅವರು ಜೀವನದ ಬಹುಭಾಗ ಗ್ರಾಮೀಣ ಪ್ರದೇಶಗಳಲ್ಲಿ ಕಳೆದುದರಿಂದ ಆ ಗ್ರಾಮೀಣ ಪರಿಸರದ ಜಾನಪದ ಅಮೂಲ್ಯ ಸಂಪತ್ತನ್ನು ತಮ್ಮ ಅನುಭವದ ಮೂಸೆಯಲ್ಲಿ ಕಟ್ಟಿಕೊಡುವುದರಲ್ಲಿ ನಿಸ್ಸಿಮರು.

ಪ್ರೊ. ಸೂಗಯ್ಯ ಹಿರೇಮಠ ಅವರು ಗುಲ್ಬರ್ಗಾ ೧೯-ಜಿಲ್ಲೆಯ ಶಹಪೂರ ತಾಲ್ಲೂಕಿನ ಸಿಂಗನಹಳ್ಳಿಯವರು. ೦೫-೧೯೫೦ರಲ್ಲಿ ಜಂಗಮ ಮನೆತನದ ಶರಣಯ್ಯ ಮತ್ತು ಶಾಂತಮ್ಮ ನವರ ಹಿರಿಯ ಮಗನಾಗಿ ಜನಿಸಿದರು. ಇವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಸ್ವಗ್ರಾಮದಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಗೋಗಿಯಲ್ಲಿ ಪಿ.ಯು.ಸಿ. ಮತ್ತು ಪದವಿ ಶಿಕ್ಷಣವನ್ನು ಗುಲ್ಬರ್ಗಾದ ಶರಣಬಸವೇಶ್ವರ ಪದವಿ ಮಹಾವಿದ್ಯಾಲಯದಲ್ಲಿ ಹಾಗೂ ಸ್ನಾತಕೋತ್ತರ ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯದ ಗುಲ್ಬರ್ಗಾ ಸ್ನಾತಕೋತ್ತರ ಕೇಂದ್ರದಲ್ಲಿ ಕನ್ನಡ ಎಂ.ಎ. ವ್ಯಾಸಂಗವನ್ನು ಮುಗಿಸಿದರು.

ನಂತರ ಡಾ. ಬಿ. ಬಿ. ಹೆಂಡಿಯವರ ನೇತೃತ್ವದಲ್ಲಿ ಸಹಾಯಕ ಸಂಶೋಧಕರಾಗಿ ಉತ್ತರ ಕರ್ನಾಟಕದ ಏಳು ಜಿಲ್ಲೆಗಳ ಸಮಗ್ರ ಜಾನಪದ ಅಧ್ಯಯನ ಕೈಗೊಂಡರು. ಅನೇಕ ಹಸ್ತಪ್ರತಿಗಳನ್ನು ಸಂಗ್ರಹಿಸಿ ಪ್ರಕಟಿಸುವ ಕೆಲಸವನ್ನು ಕೈಗೊಂಡರು. ಉತ್ತರ ಕರ್ನಾಟಕ ಜಾನಪದ ಸಂಶೋಧನೆಯ ಅನುಭವದ ಹಿನ್ನೆಲೆಯಲ್ಲಿ ಹಲವಾರು ಜಾನಪದ ಸಾಹಿತ್ಯ ಕೃಷಿ ಕೈಕೊಂಡುದುದರ ಪರಿಣಾಮವಾಗಿ ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು, ಜನಪದ ವೈದ್ಯಪದ್ಧತಿ, ಜಾನಪದ ಸಂಸ್ಕೃತಿ, ದೇವದೇವವನ, ಜಾನಪದ ಒಗಟಿನ ಕಥೆಗಳು, ಅಮೃತ ಬಳ್ಳಿ, ಪಂಚಾಂಗ ಇವು ಸೂಗಯ್ಯನವರ ಪ್ರಮುಖ ಕೃತಿಗಳಾಗಿವೆ. ಇವುಗಳಲ್ಲದೆ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ "ಜನಪದ ವೈದ್ಯಕೋಶ" ಯೋಜನೆಯ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ. ಅಧ್ಯಯನ, ಅಧ್ಯಾಪನ, ಸಂಶೋಧನೆಗಳ ಜೊತೆಜೊತೆಗೆ ಅನೇಕ ಜನಪರ ಹೋರಾಟಗಳಲ್ಲಿ ತಮ್ಮನ್ನು ಕ್ರಿಯಾಶೀಲರಾಗಿ ತೊಡಗಿಸಿಕೊಂಡು ಸದಾ ಒಂದಿಲ್ಲೊಂದು ಕಾರ್ಯಚಟುವಟಿಕೆಗಳಲ್ಲಿ ನಿರತರಾಗಿರುವ ಕಾಯಕಜೀವಿ.

ಇವರು ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಚಿಂಚೋಳಿಯ ಶ್ರೀಮತಿ ಚೆನ್ನಮ್ಮ ಬಸಪ್ಪ ಪಾಟೀಲ ಪದವಿ ಮಹಾವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕರಾಗಿ ೧೯೮೩ ರಲ್ಲಿ ವೃತ್ತಿಯನ್ನು ಆರಂಭಿಸಿದರು. ತದನಂತರ ೧೯೯೩ ರಲ್ಲಿ ಬೀದರಿನ ಬಿ. ವಿ. ಭೂಮರೆಡ್ಡಿ ಪದವಿ ಮಹಾವಿದ್ಯಾಲಯಕ್ಕೆ ವರ್ಗಾವಣೆಗೊಂಡು ೨೦೦೮ ರ ವರೆಗೆ ಅಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿ ನಂತರದಲ್ಲಿ ಬೀದರ ಕರ್ನಾಟಕ ಕಾಲೇಜಿನ ಕನ್ನಡ ಸ್ನಾತಕೋತ್ತರ ಕೇಂದ್ರದ ಗೌರವ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ ಸೇವಾನುಭವವಿದೆ. ಕೆಲವು ವರ್ಷ ಲಂಕೇಶ ಪತ್ರಿಕೆಯ ವರದಿಗಾರರಾಗಿ ಆರಂಭದ ದಿನಗಳಲ್ಲಿ ಕಾರ್ಯ ಮಾಡಿ ಪತ್ರಿಕಾರಂಗದಲ್ಲಿಯೂ ತಮ್ಮ ಛಾಪು ಮೂಡಿಸಿದವರು. ಹೀಗೆ ಸೂಗಯ್ಯ ಹಿರೇಮಠ ತಮ್ಮ ಹಲವು ಬಗೆಯ ಆಲೋಚನೆ, ದೃಷ್ಟಿಕೋನಗಳ ಹಿನ್ನೆಲೆಯಲ್ಲಿ ಹೈದ್ರಾಬಾದ ಕರ್ನಾಟಕದ ವಿಶಿಷ್ಟ ಜಾನಪದ ತಜ್ಞರೆನಿಸಿಕೊಂಡಿದ್ದಾರೆ.

ಹೀಗೆ ಮೊದಲ ತಲೆಮಾರಿನ ಜಾನಪದ ಸಾಧಕರ ಕಿರುಪರಿಚಯ ಮಾಡಿಕೊಡುವ ಸಣ್ಣ ಪ್ರಯತ್ನವನ್ನು ಈ ಕಿರು ಪ್ರಬಂಧದ ಮೂಲಕ ಮಾಡಲಾಗಿದೆ.

ಇನ್ನೂ ಹಲವಾರು ದ್ವಿತೀಯ ಘಟ್ಟದ ಜಾನಪದ ಸಾಧಕರಿದ್ದಾರೆ. ಡಾ. ಚೆನ್ನಣ್ಣ ವಾಲೀಕಾರ, ಡಾ. ಬಸವರಾಜ ಸರಬದ, ಡಾ. ಪಿ. ಕೆ. ಖಂಡೋಬಾ, ಡಾ. ಡಿ. ಬಿ. ನಾಯಕ, ಡಾ. ಎಚ್. ಟಿ. ಪೋತೆ, ಡಾ. ಶ್ರೀಶೈಲ ನಾಗರಾಳ, ಡಾ. ಜಗನ್ನಾಥ ಹೆಬ್ಬಾಳೆ ಇನ್ನೂ ಹಲವಾರು ಜಾನಪದ ಸಾಧಕ ವಿದ್ವಾಂಸರಿದ್ದಾರೆ. ಅವರ ವಿಸ್ತೃತವಾದ ಜೀವನ ಮತ್ತು ಸಾಹಿತ್ಯ ಸಾಧನೆ ಕುರಿತು ಮತ್ತೆ ಸಂದರ್ಭ ಒದಗಿ ಬಂದಾಗ ಅವರ ವ್ಯಕ್ತಿತ್ವದ ವಿವಿಧ ಮಜಲುಗಳನ್ನು ಓದುಗ ಸಹೃದಯರಿಗೆ ಪರಿಚಯಿಸಲು ಪ್ರಯತ್ನಿಸುತ್ತೇನೆ.


ಸಾವಿರಾರು ವರ್ಷಗಳ ಪರಂಪರೆಯ ಕನ್ನಡ ಸಾಹಿತ್ಯದಲ್ಲಿ ಹೈದ್ರಾಬಾದ ಕರ್ನಾಟಕದ ಕೊಡುಗೆಯನ್ನು ಕಡೆಗಣಿಸುವಂತಿಲ್ಲ ಪ್ರಾಚೀನ ಕನ್ನಡ ಸಾಹಿತ್ಯದ ಆದ್ಯ ಲಕ್ಷಣ ಗ್ರಂಥ. 'ಕವಿರಾಜಮಾರ್ಗ' [ಕ್ರಿ.ಶ-೮೫೦] ಹನ್ನೆರಡನೆಯ ಶತಮಾನದ ವಚನಸಾಹಿತ್ಯ ಆನಂತರದ ಅನುಭಾವ ಸಾಹಿತ್ಯಗಳ ಜೊತೆಗೆ ಹೊಸಗನ್ನಡ, ನವೋದಯ, ನವ್ಯ, ಪ್ರಗತಿಶೀಲ, ದಲಿತ ಹಾಗೂ ಬಂಡಾಯ ಚಳುವಳಿಗಳಲ್ಲಿ ಇಲ್ಲಿನವರ ಪಾಲು ಅಪೂರ್ವವಾದುದು. ಕಾವ್ಯ, ಕಥೆ, ಕಾದಂಬರಿ ಹಾಗೂ ನಾಟಕ ಸಾಹಿತ್ಯ ಪ್ರಕಾರಗಳಲ್ಲಿ ಅನೇಕ ಪ್ರತಿಭೆಗಳು ಸಾಧನೆ ಮಾಡಿದ ನಿದರ್ಶನಗಳಿವೆ. ಜಾನಪದ ಸಾಹಿತ್ಯದಲ್ಲಂತೂ ಕರ್ನಾಟಕದಲ್ಲಿಯೇ ಅತಿ ಹೆಚ್ಚು ಕೆಲಸ ಮಾಡಿದ ಹೆಗ್ಗಳಿಕೆ ಹೈದ್ರಾಬಾದ ಕರ್ನಾಟಕದ ಪ್ರದೇಶಕ್ಕಿದೆ ಎಂಬ ಗರ್ವ ನಮಗಿದೆ. ■■

ಬಿ.ಎಲ್.ಡಿ.ಇ.ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಬಸವನ ಬಾಗೇವಾಡಿ



Scanned with CamScanner

RNI Regd. No. KARBIL/2014/54464



जातियों का उत्थान-पतन, आँधियाँ झडी, प्रचंड समीर
खडे देखा झेला हँसते प्रलय में पले हुए हम वीर ।
चरित के पूत, भुजा में शक्ति नम्रता रही सदा सम्पन्न,
हृदय के गौरव में था गर्व, किसी को देख न सके विपन्न ।।

हमारे संचय में था दान, अतिथि थे सदा हमारे देव,
वचन में सत्य, हृदय में तेज, प्रतिज्ञा में रहती थी टेव ।
वही है रक्त, वही है देश, वही साहस है, वैसा ज्ञान,
वही है शांति वही है शक्ति, वही हम दिव्य आर्य-सन्तान ।।

जिएँ तो सदा उसी के लिए-यही अभिमान रहे यह हर्ष,
निछावर कर दें हम सर्वस्व, हमारा प्यारा भारतवर्ष ।।

-जयशंकर 'प्रसाद'

ಜಾತಿಗಳ ಏಳು-ಬೀಳು ಬಿರುಗಾಳಿಗಳು ಬಂದವು, ಪ್ರಚಂಡ ಗಾಳಿ
ನೋಡಿದೇವು ಅನುಭವಿಸಿದೇವು ನಗುತ್ತಾ ಪ್ರಳಯದಲ್ಲಿ ಬೆಂದ ವೀರರು ನಾವು
ಚಾರಿತ್ರಿಕ ಸಂತಾನ, ಭುಜಗಳಲ್ಲಿ ಶಕ್ತಿ, ನಮ್ರತೆಯೇ ನಮ್ಮ ಸಂಪತ್ತು
ಹೃದಯದಲ್ಲಿ ಗೌರವದ ಗರ್ವ, ಯಾರಿಗೂ ನಾವು ಕಷ್ಟದಲ್ಲಿ ಕಂಡಿಲ್ಲ
ನಮ್ಮ ಗಳಿಕೆಯಲ್ಲಿ ದಾನ, ಅತಿಥಿಗಳು ಸದಾ ನಮ್ಮ ದೇವರು,
ವಚನದಲ್ಲಿ ಸತ್ಯ, ಹೃದಯದಲ್ಲಿ ತೇಜಸ್ಸು, ಪ್ರತಿಜ್ಞೆಯಲ್ಲ ರೀತಿ,
ಅದೇ ರಕ್ತ, ಅದೇ ದೇಶ, ಅದೇ ಸಾಹಸ, ಅಂತಹದೇ ಜ್ಞಾನ,
ಅದೇ ಶಾಂತಿ ಅದೇ ಶಕ್ತಿ, ಅದೇ ನಮ್ಮ ದಿವ್ಯ ಆರ್ಯ ಸಂತಾನ,
ಬದುಕಿದರೆ ಸದಾ ಅದಕ್ಕಾಗಿ ಇದೇ ಅಭಿಮಾನ ಹರ್ಷವಾಗಿರಲಿ
ಸರ್ವಸ್ವವೇ ಸಮರ್ಪಿಸು, ನಮ್ಮ ಪ್ರಿಯ ಭಾರತ ದೇಶಕ್ಕೆ.

– ಜಯಶಂಕರ 'ಪ್ರಸಾದ'

ISSN 2320-0391
9 772320 039008

सौम्य प्रकाशन
'कबीर कुंज' महाबलेश्वर कॉलनी,
दर्गा जेल के सामने,
विजयपुर - 586103 (कर्नाटक)

ಸೌಮ್ಯ ಪ್ರಕಾಶನ
'ಕಬೀರ ಕುಂಜ' ಮಹಾಬಳೇಶ್ವರ ಕಾಲೋನಿ,
ದರ್ಗಾ ಜೇಲ ಮುಂದೆ,
ವಿಜಯಪುರ - ೫೮೬೧೦೩ (ಕರ್ನಾಟಕ)

Scanned with CamScanner